ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-24 ಸಂಚಿಕೆ-12 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## 'ಪ್ರಜ್ವಲಿಸಿದವು ನೂರಾರು ದೀಪಗಳು ಶ್ರೀ ಶಾರದಾ ಮಂದಿರವ ಬೆಳಗಲು'....

## ದೀಪಾವಳಿ ಸಂಭ್ರಮ'





ದೀಪಾವಳಿ ಹಬ್ಬವೆಂದರೆ ಎಲ್ಲರಿಗೂ ಸಂಭ್ರಮ ಸಡಗರ. ಮನೆಯವರೆಲ್ಲಾ ಒಟ್ಟಾಗಿ ತುಂಬಾ ಖುಷಿಯಿಂದ ಆಚರಿಸುವ ನಮ್ಮ ಸಾಂಪ್ರದಾಯಿಕ ಹಬ್ಬವೇ ಈ ದೀಪಾವಳಿ. ಹಿಂದಿನ ದಿನದ ಮುಸ್ಸಂಜೆಗೆ ಬಿಸಿನೀರಿನ ಹಂಡೆಗೆ ಶೃಂಗಾರ ಮಾಡಿ, ದೀಪವನ್ನು ಹಚ್ಚಿ, ಬಾವಿಯಿಂದ ನೀರನ್ನು ಸೇದು ತಂದು ಜಾಗಟೆ-ಪಟಾಕಿ ಶಬ್ದದೊಂದಿಗೆ ತುಂಬಿಸುತ್ತೇವೆ. ನರಕ ಚತುರ್ದಶಿಯಂದು ಪ್ರಾತಃಕಾಲ, ಅಮ್ಮನ ಕೈಯಿಂದ ಎಣ್ಣೆಶಾಸ್ತ್ರ ಆದ ಮೇಲೆ, ಮೈಯೆಲ್ಲಾ ಎಣ್ಣೆ ಹಚ್ಚಿ-ತಿಕ್ಕಿ ಮಾಡುವ ತೈಲಾಭ್ಯಂಗವು ನಮ್ಮ ಹುರುಪನ್ನು-ಆರೋಗ್ಯವನ್ನು ವರ್ಧಿಸುವುದು. ಲಕ್ಷ್ಮೀ ಪೂಜೆ, ಗೋ-ಪೂಜೆ, ಬಲೀಂದ್ರ ಪೂಜೆ, ತುಳಸೀ ಪೂಜೆ ಇತ್ಯಾದಿ ಧಾರ್ಮಿಕ ಆಚರಣೆಗಳನ್ನು ನೆರವೇರಿಸಿ, ಪಟಾಕಿಗಳನ್ನು ಸಿಡಿಸಿ, ಹಣತೆ ದೀಪಗಳನ್ನು ಬೆಳಗಿ, ಗೂಡು ದೀಪಗಳನ್ನು ತೂಗು ಹಾಕಿ ರುಚಿರುಚಿಯಾದ ಖಾದ್ಯಗಳನ್ನು ಸವಿದು ಸಂಭ್ರಮಿಸುತ್ತೇವೆ. 'ಅಜ್ಞಾನ-ನೋವು' ಎಂಬ ಕತ್ತಲನ್ನು ದೂರ ಮಾಡಿ 'ಬೆಳಕಿನ ಹಬ್ಬ' ದೀಪಾವಳಿಯು ನಮ್ಮ ಬಾಳನ್ನು ಬೆಳಗುವುದು ಹಾಗೂ ಯಾವಾಗಲೂ ಸುಖ-ಶಾಂತಿ-ನೆಮ್ಮದಿಗಳನ್ನು ನೀಡುವವು ಎಂಬ ಆಶಾಭಾವನೆ ನಮ್ಮದು.

ದಿನಾಂಕ 14.11.2023 ಮಂಗಳವಾರ, ಬಲಿಪಾಡ್ಯಮಿಯಂದು ಸಂಜೆ ಗಂಟೆ 6 ರಿಂದ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಶ್ರೀ ಶಾರದಾ ಮಂಟಪದಲ್ಲಿ 'ದೀಪಾವಳಿ ಸಂಭ್ರಮ' ಕಾರ್ಯಕ್ರಮವನ್ನು ಆಯೋಜಿಸಿತ್ತು. ಸೂರ್ಯಾಸ್ತಮಾನವಾಗುತ್ತಿದ್ದಂತೆಯೇ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದ ನಮ್ಮ ಸಮಾಜ ಬಾಂಧವರು ಶ್ರೀ ಶಾರದಾ ಮಂದಿರದ ಮುಂಭಾಗ, ಇಕ್ಕೆಲಗಳಲ್ಲಿ ಹಾಗೂ ಸುತ್ತಲೂ ಅತ್ಯುತ್ಸಾಹದಿಂದ ಹಣತೆಯ ದೀಪಗಳನ್ನು ಹಚ್ಚಿ, ಅಚ್ಚುಕಟ್ಟಾಗಿ ಜೋಡಿಸಿ, ಆವರಣವನ್ನು ಬೆಳಗಿಸಿದರು. ಅಸಂಖ್ಯಾತ ದೀಪಗಳು ಪ್ರಜ್ವಲಿಸುತ್ತಿರುವಾಗ ಆ ಬೆಳಕಿನಲ್ಲಿ ಮಂದಿರ ಮತ್ತು ಮಂಟಪ ಆಕರ್ಷಕವಾಗಿ ಕಾಣುತ್ತಿತ್ತು. ಅರ್ಚಕ ಶ್ರೀ ಧರಣೇಶರು ತುಳಸೀ ಪೂಜೆಯನ್ನು ನಡೆಸಿಕೊಟ್ಟರು. ಪ್ರಸಾದವನ್ನು ವಿತರಿಸಲಾಯಿತು.

ಶ್ರೀ ಶಾರದಾ ಮಾತೆಯು ಮಂಗಳಾರತಿಯ ತರುವಾಯ ಸಮಾಜ ಬಾಂಧವರು ಶ್ರೀ ಶಾರದಾ ಮಂಟಪದಲ್ಲಿ ಆಸೀನರಾದರು. ಸುಮಾರು ಒಂದೂವರೆ ಗಂಟೆಯ ಕಾಲ ಪುಟಾಣಿಗಳಿಂದ ಹಿರಿಯ ನಾಗರಿಕರವರೆಗೂ ಎಲ್ಲಾ ವಯೋಮಾನದವರು ಹಾಡು ಮತ್ತು ನೃತ್ಯಗಳ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮವನ್ನು ಸಂಘದ ನಿರ್ದೇಶಕ ವಿಶ್ವನಾಥ ಶ್ಯಾನುಭೋಗರು ನಿರ್ವಹಿಸಿದರು. ಸಾಯಂಕಾಲ ಚರ್‌ಮುರಿ-ಕಷಾಯ, ರಾತ್ರಿಗೆ ರೋಟಿ, ಪುಲಾವ್, ಮಸಾಲೆದೋಸೆ, ಮೊಸರನ್ನ, ಗೆಣಸಿನ ಸ್ವಾದಿಷ್ಟ ಪಾಯಸ, ಮಜ್ಜಿಗೆ ಸೋಡಾಗಳನ್ನು ಸಂಘವು ವ್ಯವಸ್ಥೆ ಮಾಡಿತ್ತು. ದೀಪಾವಳಿಯನ್ನು ಸಂಭ್ರಮಿಸಲು ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಪ್ರಭಾಕರ ಭಂಡಿ, ನಿರ್ದೇಶಕರುಗಳು, ಪೂರ್ವಾಧ್ಯಕ್ಷರುಗಳು, ಸಲಹೆಗಾರರು ಮತ್ತು ಸಮಾಜ ಬಾಂಧವರು ಹಾಗೂ ಮೆನೇಜರ್ ಅಜಿತ್ ರಾವ್ ಸಹಕರಿಸಿದರು.

ವರದಿ : **ಡಾ.ಎಂ. ಶಾಮರಾವ್ ಎಂ.ಡಿ.**

## ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭೆಗೆ ಆಯ್ಕೆ




ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಮುಂದಿನ ಸಾಲಿನ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಗಣೇಶ್ ರಾವ್ ಕುಂಭಾಶಿ ಹಾಗೂ ಕೋಶಾಧಿಕಾರಿಯಾಗಿ ಶ್ರೀ ಕೇಶವರಾವ್ ಕಾರ್ಕಳ ಅವಿರೋಧ'ವಾಗಿ ಆಯ್ಕೆಯಾಗಿದ್ದಾರೆ. ದಿನಾಂಕ 03.12.2023ರಂದು ಕಡಿಯಾಳಿಯ ಭವಾನಿ ಮಂಟಪದಲ್ಲಿ ನಡೆದ ಜಿಲ್ಲಾ ಬ್ರಾಹ್ಮಣ ಮಹಾಸಭಾದ ವಾರ್ಷಿಕ ಮಹಾಸಭೆಯಲ್ಲಿ ಈ ಆಯ್ಕೆ ನೆರವೇರಿತು. ನಮ್ಮ ಸಮಾಜದ ಗಣ್ಯರೀರ್ವರು ಜಿಲ್ಲಾ ಬ್ರಾಹ್ಮಣ ಸಭಾದ ಪದಾಧಿಕಾರಿಗಳಾಗಿ ಆಯ್ಕೆಯಾದ ಬಗ್ಗೆ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘವು ಅಭಿನಂದನೆಗಳನ್ನು ಸಲ್ಲಿಸುತ್ತಾ ಅವರ ಅಧಿಕಾರವಧಿಯಲ್ಲಿ ಯಶಸ್ಸನ್ನು ಗಳಿಸಲಿ ಎಂದು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.



ಈ ಸಂದರ್ಭದಲ್ಲಿ ಉಡುಪಿ ಜಿಲ್ಲಾ ಬ್ರಾಹ್ಮಣ ಸಭಾದ ಮಹಾಸಭೆಯಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ಹಾವಂಜೆ ಮಂಜುನಾಥಯ್ಯ ಹಾಗೂ ಇತರ ಬ್ರಾಹ್ಮಣ ಸಮಾಜದವರನ್ನು ಗುರುತಿಸಿ ಗೌರವಿಸಲಾಯಿತು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಯುವ ವೇದಿಕೆ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ಸಂಘಟನೆಯಲ್ಲಿ ನಮ್ಮ ಸಮಾಜ ಬಾಂಧವರಿಗೆ ದಿನಾಂಕ 24–12–2023ನೇ ರವಿವಾರದಂದು ಬೆಳಿಗ್ಗೆ 8–00ಕ್ಕೆ ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ

ಏರ್ಪಡಿಸಲಾಗಿದೆ.7.30ರಿಂದ, ಉಪಹಾರ 9.00ಕ್ಕೆ ಉದ್ಘಾಟನೆ, 5.00ಕ್ಕೆ ಸಮಾರೋಪ ಸಮಾರಂಭ

ನಗದು ಬಹುಮಾನಗಳ ಪ್ರಾಯೋಜಕರು :

- ಪ್ರಥಮ ಬಹುಮಾನ : ರೂ.12,000/- ಶ್ರೀ ಅಲೆವೂರು ಶ್ಯಾಮರಾಯರು ತಮ್ಮ ಮಾತಾಪಿತರಾದ ದಿ| ಶಾಂತಾ ಹಾಗೂ ದಿ| ಭುಜಂಗರಾಯರ ಸ್ಮರಣಾರ್ಥ
- ದ್ವಿತೀಯ ಬಹುಮಾನ : ರೂ.8,000/- ಶ್ರೀಮತಿ ಸುನಂದ ಹಾಗೂ ಶ್ರೀ ಸಿ.ಎಸ್.ರಾವ್, ಚಿಟ್ಪಾಡಿ
- ಸಮಾಧಾನಕರ ಬಹುಮಾನ : ಒಟ್ಟು ರೂ.6,000/- ಶ್ರೀ ವೈ. ಭುವನೇಂದ್ರ ರಾಯರು ತಮ್ಮ ಮಾತಾಪಿತರಾದ ದಿ| ಗಿರಿಜಮ್ಮ ಹಾಗೂ ದಿ| ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಸ್ಮರಣಾರ್ಥ
- ಉತ್ತಮ ಬೌಲರ್, ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಪುರಸ್ಕಾರ : ಒಟ್ಟು ರೂ.6,000/-, ಶ್ರೀ ಬಿ. ಜಯರಾಮ ರಾವ್

**ಮಹಿಳೆಯರ ತ್ರೋಬಾಲ್ ಪಂದ್ಯಾಟ**

- ಪ್ರಥಮ ಬಹುಮಾನ : ರೂ.5,000/-
- ದ್ವಿತೀಯ ಬಹುಮಾನ : ರೂ.3,000/-
- ಉತ್ತಮ ಆಟಗಾರ್ತಿ : ರೂ.1,000/-

} ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ್ ರಾವ್, ಚಿಟ್ಪಾಡಿ

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಕ್ರಿಕೆಟ್‌ಪಂದ್ಯಾಟ ನಡೆಯಲಿದೆ.**

ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಸಹಕರಿಸುವವರು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಮಹಿಳಾ ವೇದಿಕೆ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ


ತಾ.24-12-2023ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 8-00ರಿಂದ

ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ **ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆ**ಗಳನ್ನು ಹಾಗೂ ಅಪರಾಹ್ನ 2ರಿಂದ ಎಮ್.ಜಿ.ಎಮ್. ಕ್ರೀಡಾಂಗಣದಲ್ಲಿ **ತ್ರೋಬಾಲ್ ಪಂದ್ಯಾಟ**ವನ್ನು ಏರ್ಪಡಿಸಲಾಗಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ

ಆಸಕ್ತ ತಂಡಗಳು ಸಂಘದ ಕಾರ್ಯದರ್ಶಿ ಪಿ. ಪ್ರಭಾಕರ ಭಂಡಿ (9449254846) ಅಥವಾ ಜೊತೆಕಾರ್ಯದರ್ಶಿ ವಿನೋದ್‌ಕುಮಾರ್ (8310966892), ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 17-12-2023ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ. ಪಂದ್ಯಾಟದ ಫಿಕ್ಚರ್‌ನ್ನು 20.12.2023ರ ಸಾಯಂಕಾಲ ಹಾಕಲಾಗುವುದು.


– ಆಡಳಿತ ಮಂಡಳಿ


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಬ್ರಹ್ಮಾವರದಿಂದ ರಾಮೇಶ್ವರದ ಕಡೆಗೆ

ಚಿತ್ರ, ಲೇಖನ–ಕೆ. ದಿನಮಣಿ ಶಾಸ್ತ್ರೀ, ಬ್ರಹ್ಮಾವರ






ನಮ್ಮ ಸುತ್ತಲಿನ ಲೋಕದ ಬಗ್ಗೆ ಅರಿವನ್ನು ಹೆಚ್ಚಿಸಿಕೊಳ್ಳಬೇಕಾದರೆ ಪ್ರವಾಸಗಳಿಗೆ ಹೋಗಬೇಕಾಗುತ್ತದೆ. ಹಾಗಾಗಿ ದೇಶ ಸುತ್ತು_ ಕೋಶ ಓದು ಎನ್ನುವ ಮಾತು ಜನಜನಿತ. ಇಂತಹ ಒಂದು ಯೋಚನೆಯೊಂದಿಗೆ ಬ್ರಹ್ಮಾವರ ವಲಯ ಬ್ರಾಹ್ಮಣ ಸಮಿತಿಯವರು ಆಯೋಜಿಸಿದ್ದ ಐದು ದಿನಗಳ ಪ್ರವಾಸದ ಅಂಗವಾಗಿ ಎಂಭತ್ತು ಜನ ಪುರುಷ ಮತ್ತು ಮಹಿಳೆಯರ ತಂಡ ಎರಡು ಬಸ್ಸು (ಐರಾವತ) ಗಳಲ್ಲಿ ಬ್ರಹ್ಮಾವರದಿಂದ ಮಧ್ಯಾಹ್ನ ಮೂರು ಗಂಟೆಗೆ ಹೊರಟೆವು. ಸಂಜೆಯ ವೇಳೆಗೆ ಕಾರ್ಕಳ ಸಮೀಪದ ಬಜಗೋಳಿಯಲ್ಲಿ ತಿಂಡಿಯನ್ನು ಸೇವಿಸಿ(ಪ್ರವಾಸದ ರೂವಾರಿಗಳೇ ಐದು ದಿನಗಳಿಗೆ ಬೇಕಾಗುವಷ್ಟು ಆಹಾರಗಳನ್ನು ತಯಾರಿಸಿ ತಂದಿದ್ದರು.). ಮುಂದೆ ಹಾಸನದಲ್ಲಿ ರಾತ್ರಿಯ ಊಟವನ್ನು ಮುಗಿಸಿ, ಬೆಂಗಳೂರಿನಿಂದ ಸೇಲಂ ಸಮೀಪಿಸುತ್ತಿದ್ದಂತೆ, ಬಸ್ಸಿನ ಕಿಟಕಿಯ ಪರದೆ ಸರಿಸಿದರೆ ದಾರಿಯುದ್ದಕ್ಕೂ ಹೂದೋಟಗಳ ಚೆಲುವು, ಕೃಷಿ ಭೂಮಿಗಳು, ಸಾಲು ಸಾಲು ಬೆಟ್ಟಗಳು, ಮುಂಜಾನೆಯ ಹಿಮದ ನಡುವಿನಿಂದ ಕಾಣುವ ಸೂರ್ಯೋದಯ ನೋಡುವ ಕಣ್ಣಿಗೆ ಹಬ್ಬವಾಗಿತ್ತು. ಮುಂಜಾನೆ ಆರುವರೆ ಗಂಟೆಗೆ ಸೇಲಂ ತಲುಪಿದ ನಾವು, ಅಲ್ಲಿ ಚಹ ಸೇವನೆಯೊಂದಿಗೆ ಗುಣಶೀಲಂ ತಲುಪಿ ಅಲ್ಲಿನ ಕಾವೇರಿ ನದಿಯಲ್ಲಿ ಸ್ನಾನಾದಿ ಮತ್ತು ಆಹಾರಗಳನ್ನು ಸೇವಿಸಿ, ಸಮೀಪದ ವೆಂಕಟಾಚಲಪತಿ ದೇವಾಲಯ(ಏಳುನೂರುಕ್ಕೂ ಅಧಿಕ ವರ್ಷಗಳಷ್ಟು ಹಿಂದಿನ ಶಿಲಾಮಯ ದೇವಸ್ಥಾನ)ವನ್ನು ವೀಕ್ಷಿಸಿ ಮುಂದೆ ಶ್ರೀ ರಂಗಂ ಅನ್ನು ಹನ್ನೆರಡು ಗಂಟೆಗೆ ತಲುಪಿದೆವು. ಅಲ್ಲಿನ ಶ್ರೀ ವ್ಯಾಸರಾಯ ಮಠದಲ್ಲಿ ಮಧ್ಯಾಹ್ನದ ಭೋಜನದ ಬಳಿಕ, ಸಮೀದಲ್ಲಿಯೇ ಇರುವ ಶ್ರೀ ರಂಗನಾಥಸ್ವಾಮಿ ದೇವಾಲಯದ ಕಡೆಗೆ ಹೊರಟೆವು. ಇದು ಕ್ರಿ.ಪೂ.ಮೂರನೇ ಶತಮಾನದ, ಗಂಗರು ನಿರ್ಮಿಸಿದ, ಭಾರತದ ಶ್ರೇಷ್ಠ ಆಧ್ಯಾತ್ಮಿಕ ದೇವಾಲಯವಾಗಿದೆ. ನೂರಐವತ್ತೈದು ಎಕರೆ ಪ್ರದೇಶದಲ್ಲಿ ಹರಡಿರುವ ಈ ದೇವಾಲಯವು ಇಪ್ಪತ್ತೊಂದು ಗೋಪುರಗಳನ್ನು ಮತ್ತು ಮೂವತ್ತೊಂಭತ್ತು ಮಂಟಪ ಹಾಗೂ ಅನೇಕ ಕಲ್ಯಾಣಿಗಳನ್ನು ಹೊಂದಿದೆ. ಮುಗಿಲೆತ್ತರಕ್ಕೆ ಚಾಚಿರುವ ಮುಖ್ಯ ಗೋಪುರವು(ಇನ್ನೊರಮೂವತ್ತಾರು ಅಡಿ ಎತ್ತರ) ದ್ರಾವಿಡ ಶೈಲಿಯ ವಾಸ್ತುಶಿಲ್ಪದ ಮೇರುಕೃತಿಯಾಗಿದೆ. ಮೊದಲ ನೋಟಕ್ಕೇ ಈ ಗೋಪುರದ ವಿನ್ಯಾಸವು ನಮ್ಮನ್ನು ಆಶ್ಚರ್ಯ ಹಾಗೂ ಚಿಂತನಶೀಲರನ್ನಾಗಿಸುತ್ತದೆ.

ದೇವಾಲಯದ ಹೆಬ್ಬಾಗಿಲಿಂದ ಗರ್ಭಗುಡಿಯ ವರೆಗಿನ ಒಳ ವಿನ್ಯಾಸ ಸಹಿತ ಶಿಲ್ಪಕೃತಿಗಳನ್ನು ಅಕ್ಷರ ರೂಪದಲ್ಲಿ ಹೇಳಲಸಾಧ್ಯ.

(3ನೇ ಪುಟಕ್ಕೆ...)



**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಕಟೀಲು ಯಕ್ಷಗಾನ ಕಲಾರಂಗ ಪ್ರಶಸ್ತಿ ಪ್ರಧಾನ



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಸರಸ್ವತೀ ಸದನದಲ್ಲಿ ನವೆಂಬರ್ 18ರಂದು ಜರಗಿದ ಯಕ್ಷಗಾನ ಕಲಾರಂಗ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಯಕ್ಷಶಾಲ್ಮಲಾ ಸಂಸ್ಥೆಗೆ ಮತ್ತು ಎರ್ಮಾಳು ವಾಸುದೇವ ರಾವ್ ಸೇರಿ 22 ಮಂದಿ ಕಲಾವಿದರಿಗೆ ರೂ. 20,000 ನಗದು, ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಸ್ಕಾರ ನೀಡುವ, ಸಂಸ್ಕೃತಿ ಉಳಿಸುವ, ಯಕ್ಷಗಾನದ ಕಲಾವಿದರ ತ್ಯಾಗ, ಶ್ರಮ ಸದಾ ಅಭಿನಂದನೀಯ. ಅಂತಹ ಕಲಾವಿದರನ್ನು ಗೌರವಿಸುವುದು ಸ್ತುತ್ಯರ್ಹ ಎಂದು ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಹೇಳಿದರು.

ಶಾಸಕ ಉಮಾನಾಥ ಕೋಟ್ಯಾನ್, ಪ್ರಭಾಕರ ಸುವರ್ಣ, ಲೀಲಾಕ್ಷ ಬಿ. ಕರ್ಕೇರ, ಎಂ.ಕೆ. ಭಟ್ ಕಡೋಕ, ಕೆ. ಸದಾಶಿವ ಭಟ್, ಉಪಾಧ್ಯಕ್ಷ ಪಿ. ಕಿಶನ್ ಹೆಗ್ಡೆ, ಜತೆ ಕಾರ್ಯದರ್ಶಿ ನಾರಾಯಣ ಎಂ ಹೆಗಡೆ ಉಪಸ್ಥಿತರಿದ್ದರು. ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಮುರಳಿ ಕಡೇಕಾರ್ ನಿರೂಪಿಸಿದರು.



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

# ದ.ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಂ. ದೇವಾನಂದ ಭಟ್‌ರಿಗೆ ಸಮ್ಮಾನ



ಬೆಳ್ವಾಯಿ ಬ್ಲೋಸಮ್ ಸ್ಕೂಲ್ ಹಾಗೂ ಲಯನ್ಸ್ ಕ್ಲಬ್ ಬೆಳ್ವಾಯಿ ಇವರ ಸಂಯೋಜನೆಯಲ್ಲಿ ಜರಗಿದ ಮಕ್ಕಳ ದಿನಾಚರಣೆ ಪ್ರಯುಕ್ತ ಮಕ್ಕಳ ಉತ್ಸವ–2023 ಸಂದರ್ಭದಲ್ಲಿ ಶಾಲೆಯಲ್ಲಿ ಯಕ್ಷಗಾನ ತರಬೇತಿಯ ಉದ್ಘಾಟನೆಯನ್ನು ಬನ್ನಡ್ಕ ಎಸ್.ಕೆ.ಎಫ್. ಸಂಸ್ಥೆಯ ಸ್ಥಾಪಕಾಧ್ಯಕ್ಷರಾದ ಡಾ। ರಾಮಕೃಷ್ಣ ಆಚಾರ್ ನೆರವೇರಿಸಿ ಮಕ್ಕಳಿಗೆ ಶುಭ ಹಾರೈಸಿದರು.ಈ ಸಂದರ್ಭ ಯಕ್ಷಗಾನ ಗುರುಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬೆಳ್ವಾಯಿ ಎಂ. ದೇವಾನಂದ ಭಟ್ ಇವರನ್ನು ಹಾಗೂ ಲಯನ್ಸ್ ಕ್ಲಬ್, ಊರ ಜನತೆ, ಬ್ಲೋಸಮ್ ಶಾಲಾ ವತಿಯಿಂದ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ವಿದ್ವಾನ್ ಗಾಳಿಮನೆ ವಿನಾಯಕ ಭಟ್ ಸಮ್ಮಾನಿತರ ಬಗ್ಗೆ ಅಭಿನಂದನಾ ಭಾಷಣಗೈದರು. ಡಾ। ರಾಜಶ್ರೀ ಉಪಸ್ಥಿತರಿದ್ದ ಈ ವೇದಿಕೆಯಲ್ಲಿ ಶಾಲಾ ಸ್ಥಾಪಕಧ್ಯಕ್ಷರೂ ಲಯನ್ಸ್ ಕ್ಲಬ್ ಅಧ್ಯಕ್ಷರಾದ ಶ್ರೀ ಸೈಮನ್ ಮಸ್ಕರೆನ್ಸ್ ಅಧ್ಯಕ್ಷತೆ ವಹಿಸಿ ಎಲ್ಲರನ್ನು ಸ್ವಾಗತಿಸಿದರು. ಮಹಾವೀರ ಪಾಂಡಿ ಕಾಂತವರ ಕಾರ್ಯಕ್ರಮ ನಿರೂಪಿಸಿದರು. ಲಯನ್ ಗಿಲ್ಬರ್ಟ್ ಬ್ರಿಗಾಂಜಾ ಧನ್ಯವಾದವಿತ್ತರು. ಬಳಿಕ ಜರಗಿದ ಬೆಳ್ವಾಯಿ ಶ್ರೀ ಯಕ್ಷದೇವ ಸಾಧನ ಕೇಂದ್ರದ ಮಕ್ಕಳಿಂದ ಕೃಷ್ಣಲೀಲೆ – ಕಂಸವಧೆ ಯಕ್ಷ[illegible]ಗಿತು.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.50%
(ಷರತ್ತುಗಳು ಅನ್ವಯ)

| | |
|---|---|
| ಗೃಹ ಸಾಲ | : 10.5% |
| ವಾಹನ ಸಾಲ | : 12.5% |
| ಹಳೆಯ ವಾಹನ | : 15% |
| ಆಭರಣ ಸಾಲ | : 12% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 12% |
| ಅಡಮಾನ ಸಾಲ | : 12.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 5 ವರ್ಷದ ತನಕ | : 9% |
| 5 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016–17ರಿಂದ 2021–22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☏ 2522408) ಪಡುಬಿದ್ರಿ ಶಾಖೆ (☏ 2556608) ಕೋಟೇಶ್ವರ ಶಾಖೆ (☏ 9341854114) ಬ್ರಹ್ಮಾವರ ಶಾಖೆ (☏ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

## ಬ್ರಹ್ಮಾವರದಿಂದ ರಾಮೇಶ್ವರದ ಕಡೆಗೆ

■...1ನೇ ಪುಟದಿಂದ

ಗುಡಿಯಲ್ಲಿನ ವಿಶ್ರಾಂತ ರೂಪದ ಶ್ರೀರಂಗನ ಬೃಹತ್ ಮೂರ್ತಿಯನ್ನು ಕಂಡು ಧನ್ಯತಾ ಭಾವದೊಂದಿಗೆ ಮಠಕ್ಕೆ ಹಿಂದಿರುಗಿ ಅಂದಿನ ದಿನದ ವಿಶ್ರಾಂತಿಯನ್ನು ಪಡೆದೆವು. ಮುಂಜಾನೆ ಬಹಳ ಬೇಗನೇ ನಿತ್ಯವಿಧಿಗಳನ್ನು ಪೂರೈಸಿ, ತಿಂಡಿಯನ್ನು ಸ್ವೀಕರಿಸಿ ತಂಜಾವೂರಿನ ಬೃಹದೀಶ್ವರ ದೇವಾಲಯದ ಕಡೆಗೆ ಹೊರಟೆವು. ಹದಿನಾರನೇ ಶತಮಾನದ, ಸಾವಿರ ವರುಷಗಳ ಇತಿಹಾಸವಿರುವ ಈ ದೇವಾಲಯವು ರಾಜಾರಾಜಾ ಚೋಳನಿಂದ ನಿರ್ಮಿತವಾಗಿದೆ. ಸುಮಾರು ನಲುವತ್ತನಾಲ್ಕು ಎಕರೆ ಪ್ರದೇಶದಲ್ಲಿ ಕೋಟೆಯ ಎತ್ತರವಾದ ಆವರಣದ ಗೋಡೆಯೊಳಗಿನ ಈ ದೇವಾಲಯ ಪೂರ್ತಿಯಾಗಿ ಗ್ರ್ಯಾನೈಟ್ ಶಿಲೆಯಲ್ಲಿ(ನಾಗರ ಮತ್ತು ದ್ರಾವಿಡ ಶೈಲಿಯಲ್ಲಿ) ನಿರ್ಮಾಣಗೊಂಡಿರುವ ವಿಶ್ವದ ಏಕೈಕ ದೇವಾಲಯ ಎನ್ನುವ ಖ್ಯಾತಿಗೆ ಒಳಪಟ್ಟಿದೆ. ಇನ್ನೂರ ಹದಿನಾರು ಅಡಿ ಎತ್ತರದ ಗೋಪುರ ಹೊಂದಿರುವ ಈ ದೇವಾಲಯ ಬಹಳ ಎತ್ತರದ ವೇದಿಕೆಯ ಮೇಲೆ ನಿಮಾಣಗೊಂಡಿದ್ದು, ಒಳಗೆ ಹನ್ನೆರಡು ಅಡಿ ಎತ್ತರದ ಶಿವಲಿಂಗವಿದೆ. ಎದುರಿನ ನಂದೀ ಮಂಟಪದಲ್ಲಿ ಅಷ್ಟೇ ಎತ್ತರದ ಮಹಾನಂದೀ ವಿಗ್ರಹ ಬಹಳ ಸೊಗಸಾಗಿದೆ. ಮುಖ್ಯ ದೇವಾಲಯದ ಸುತ್ತಲೂ ವಿವಿಧ ದೇವರ ಗುಡಿ ಸಹಿತ ಮಂಟಪಗಳು ಇಡೀ ಸಮುಚ್ಚಯದ ಅಂದವನ್ನು ಇಮ್ಮಡಿ ಗೊಳಿಸಿದೆ. ದ್ವಾರ ಗೋಪುರ ಸಹಿತವಾಗಿ ಇಡೀ ದೇವಾಲಯದ ಒಳ ಮತ್ತು ಹೊರಗೋಡೆಗಳಲ್ಲಿ ಸೂಕ್ಷ್ಮಚಿತ್ರಿಕೆ ಸಹಿತ ದೊಡ್ಡ ಗಾತ್ರದ ದೇವಾನುದೇವತೆಗಳ ಮೂರ್ತಿಗಳನ್ನು ಕೆತ್ತಲಾಗಿದೆ. ಮತ್ತು ಇದು ವಿಶ್ವ ಪರಂಪರೆಯ ತಾಣಗಳಲ್ಲಿ ಒಂದಾಗಿದೆ. ಒಂದುವರೆ ಗಂಟೆಗಳ ಅವಧಿಯಲ್ಲಿ ಇದರ ಸೌಂದರ್ಯವನ್ನು ಕಣ್ತುಂಬಿಕೊಂಡ ನಾವು ಹೊರಗಡೆಯಿರುವ ಖ್ಯಾತ ತಂಜಾವೂರು ಗೊಂಬೆಗಳ ಮತ್ತು ಚಿತ್ರಕಲಾಕೃತಿಗಳ ಮಳಿಗೆಗಳನ್ನು ವೀಕ್ಷಿಸಿ, ಮುಂದೆ ಕುಂಭಕೋಣಂ ಕಡೆಗೆ ಹೊರಟೆವು. ಅಲ್ಲಿ ಆದಿ ಕುಂಭಕೋಣಂ ಸ್ವಾಮಿ ದೇವಸ್ಥಾನ ವನ್ನು ತರಾತುರಿಯಲ್ಲಿ(ಸಮಯದ ಹೊಂದಾಣಿಕೆಗೆ) ವೀಕ್ಷಿಸಿ, ಸಮೀಪದ ಶ್ರೀ ಪೇಜಾವರ ಮಠದಲ್ಲಿ ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿ ಅಲ್ಲಿಯೇ ತುಸು ಹೊತ್ತು ವಿಶ್ರಾಂತಿ ಪಡೆದೆವು. ನಂತರ ಇಲ್ಲಿಯೇ ಹಜ್ಜೆ ಹೆಜ್ಜೆಗೂ ಇರುವಂತಹ ಸುಂದರ ದೇವಾಲಯಗಳನ್ನು ಮತ್ತು ಕುಂಭ ಮೇಳ ನಡೆಯುವ ಬೃಹತ್ ಪುಷ್ಕರಣಿಯನ್ನು ವೀಕ್ಷಿಸಿ, ಪುನಹ ತಂಜಾವೂರು ಕಡೆಗೆ ನಮ್ಮ ಪಯಣ ಸಾಗಿತು. ರಾತ್ರಿಯ ಮಬ್ಬು ಬೆಳಕಲ್ಲಿ ಮರಾಠಾ ರಾಜರು ನಿರ್ಮಿಸಿದ ತಂಜಾವೂರು ಅರಮನೆಯನ್ನು ವೀಕ್ಷಿಸಿ(ಶಿಥಿಲಗೊಂಡಿದ್ದು ಒಳಗಡೆ ದರ್ಬಾರು ಸಭಾಂಗಣ ಮತ್ತು ಅಳಿದುಳಿದ ಭಿತ್ತಿ ಚಿತ್ರಗಳಿವೆ.) ರಾತ್ರಿ ಒಂಭತ್ತು ಗಂಟೆಗೆ ಊಟವನ್ನು ಮುಗಿಸಿ ರಾಮೇಶ್ವರಂ ಕಡೆಗೆ ನಮ್ಮ ಪಯಣ ಸಾಗಿತು. ಬೆಳಗ್ಗೆ ಎರಡುವರೆ ಗಂಟೆಗೆ ತಲುಪಿದ ನಾವು ಅಲ್ಲಿನ ವ್ಯಾಸರಾಜ ಮಠದಲ್ಲಿ ತುಸು ನಿದ್ದೆ ಮಾಡಿ ನಿತ್ಯ ವಿಧಿಗಳನ್ನು ಪೂರೈಸಿ ಮುಂಜಾವದ ನಾಲ್ಕುವರೆ ಗಂಟೆಗೆ ಸ್ಪಟಿಕಮಣಿ ಲಿಂಗ ದರ್ಶನ ಮಾಡಲು ಕೆಲವರು ಹೊರಟರೆ, ಉಳಿದವರು ಸಮುದ್ರ ಸ್ನಾನ ಮಾಡಿ ನಂತರ ಇಪ್ಪತ್ತೊಂದು ಕುಂಡದಲ್ಲಿ ತೀರ್ಥಸ್ನಾನಗೈದರು. ಇನ್ನುಳಿದವರು ಶ್ರಾದ್ಧ ಕರ್ಮಗಳನ್ನು ಪೂರೈಸಿದರು. ಸನಿಹದಲ್ಲೇ ಇರುವ ಉಡುಪಿ ಛತ್ರದಲ್ಲಿ ಬೆಳಗ್ಗಿನ ಉಪಹಾರ ಸೇವಿಸಿ ದೇವಾಲಯದ ಕಡೆ ಹೊರಟೆವು. ಹನ್ನೆರಡು ಜ್ಯೋತಿರ್ಲಿಂಗಗಳಿರುವ ದೇವಾಲಯಗಳಲ್ಲಿ ಇದೂ ಒಂದು. ಭಾರತದಲ್ಲಿಯೇ ಅತೀ ದೊಡ್ಡ ದೇವಾಲಯವಾಗಿದೆ. ಹದಿನೈದು ಎಕರೆ ಪ್ರದೇಶದಲ್ಲಿ ವಿಸ್ತಾರವಾಗಿ ಹರಡಿರುವ ಈ ದೇವಾಲಯ ನಾಲ್ಕು ಬೃಹತ್ ರಾಜಗೋಪುರವನ್ನು ಹಾಗೂ ಇಪ್ಪತ್ತೆರಡು ತೀರ್ಥಕುಂಡಗಳನ್ನು ಹೊಂದಿದೆ. ಹನ್ನೆರಡನೇ ಶತಮಾನದಲ್ಲಿ ಪಾಂಡ್ಯ ಎಂಬ ರಾಜವಂಶ ಇದನ್ನು ಅಭಿವೃದ್ಧಿಗೊಳಿಸಿದರು. ಒಳಪ್ರಾಕಾರಗಳಲ್ಲಿ ಬಹಳಷ್ಟು ಶಿಲ್ಪಕಲಾಕೃತಿಗಳಿದ್ದು ಜೊತೆಗೆ ಇಕ್ಕೆಲಗಳಲ್ಲಿ ಸಾವಿರಾರು ವರ್ಣಮಯ ಕಂಬಗಳ ಸಾಲುಗಳನ್ನು ಹೊಂದಿರುವ ಕಾರಿಡಾರ್ ಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಶ್ರೀ ರಾಮನಾಥಸ್ವಾಮಿ ಮತ್ತು ಶ್ರೀ ಪರ್ವತ ವರ್ಧಿನಿಯ ದರುಷನ ಮಾಡಿ, ಉಡುಪಿ ಛತ್ರದಲ್ಲಿಯೇ ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿ ಧನುಷ್ಕೋಡಿ(ವಾನರ ಸೇನೆಯಿಂದ ಶ್ರೀ ರಾಮ ಸೇತು ನಿರ್ಮಿಸಿದ ಸ್ಥಳ ಎಂಬ ನಂಬಿಕೆಯಿದೆ) ಕಡೆಗೆ ನಮ್ಮ ಪಯಣ ಸಾಗಿತು. ಈ ಸ್ಥಳವು ಹಿಂದೂ ಮಹಾಸಾಗರ ಮತ್ತು ಬಂಗಾಳಕೊಲ್ಲಿ ಇವರಡೂ ಒಂದನ್ನೊಂದು ಸೇರುವ ರುದ್ರ ರಮಣೀಯ ದೃಶ್ಯದ ತಾಣವಾಗಿದೆ. ಅರುವತ್ತು ವರ್ಷಗಳ ಹಿಂದಿನ ಭಾರೀ ಸುನಾಮಿಗೆ ತುತ್ತಾದ ಮನೆಗಳು,ಚರ್ಚಗಳು,ರೆಲ್ವೇ ಸ್ಟೇಶನ್ ದಾರಿಯುದ್ದಕ್ಕೂ ಕಾಣಸಿಗುತ್ತದೆ. ಇಲ್ಲಿಂದ ನಮ್ಮ ಪಯಣ ಶ್ರೀ ಕೋದಂಡರಾಮ ದೇವಸ್ಥಾನ(ವಿಭೀಷಣನಿಗೆ ಶ್ರೀ ಲಕ್ಷ್ಮಣನು ಪಟ್ಟಾಭಿಷೇಕ ಮಾಡಿದ ಸ್ಥಳ) ದ ಕಡೆಗೆ ಹೊರಟಿತು. ನಂತರ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ಹೆಸರಿನ ರಾಷ್ಟ್ರೀಯ ಶಂಖಗಳ ಮ್ಯೂಸಿಯಂ ವೀಕ್ಷಿಸಿ ಮಧುರೈ ಕಡೆಗೆ ಹೊರಟೆವು. ರಾತ್ರಿ ಹತ್ತು ಗಂಟೆಗೆ ತಲುಪಿ ಅಲ್ಲಿನ ಶ್ರೀ ಶಂಕರ ಮಠದಲ್ಲಿ ರಾತ್ರಿಯ ಭೋಜನ ಮಾಡಿ, ವಿಶ್ರಾಂತಿ ಪಡೆದೆವು. ಮುಂಜಾನೆ ಮೂರು ಗಂಟೆಗೆ(ದೇವರ ಪೂಜೆಯ ಸಮಯ) ನಾಲ್ಕು ಕಿ.ಮೀ.ದೂರದಲ್ಲಿರುವ ಮೀನಾಕ್ಷೀ ದೇವಾಲಯ ವೀಕ್ಷಿಸಲು ಹೊರಟೆವು.ಇದು ದ್ರಾವಿಡ ಶೈಲಿಯ ಸುಂದರೇಶ್ವರ(ಶಿವ) ಮತ್ತು ಮೀನಾಕ್ಷಿ(ಪಾರ್ವತಿ)ಯ ದೇಗುಲವಾಗಿದೆ. ಇಡೀ ದೇವಾಲಯದ ಸಂಕೀರ್ಣವೇ ಒಂದು ನಗರದಂತೆ ಭಾಸವಾಗುತ್ತದೆ(ಹದಿನೈದು ಎಕರೆ) . ಹನ್ನೆರಡು ಭವ್ಯ ಗೋಪುರಗಳಿದ್ದು, ನಾಲ್ಕು ದಿಕ್ಕಿನ ನಾಲ್ಕು ಬೃಹತ್ ಗೋಪುರಗಳು ಅದ್ಭುತವಾಗಿದೆ. ನೂರ ಎಪ್ಪತ್ತು ಅಡಿ ಎತ್ತರದ ಮುಖ್ಯ ಗೋಪುರವು ವರ್ಣಮಯ ಕಲಾಕೃತಿಗಳಿಂದ ಕಂಗೊಳಿಸುತ್ತಿದೆ. ಗರ್ಭಗುಡಿಯ ವಿಮಾನವು ಬಂಗಾರದ ವರ್ಣದಿಂದ ಶೋಭಿಸುತ್ತಿದೆ. ವಿಶೇಷವಾದ ವಿವಾಹ ಮಂಟಪ, ನಮ್ಮನ್ನು ಮಂತ್ರಮುಗ್ಧಗೊಳಿಸುವ ಸಾವಿರಾರು ಶಿಲ್ಪಕಲಾಕೃತಿಗಳು, ಏಕಶಿಲೆಯಲ್ಲಿ ಕೆತ್ತಲ್ಪಟ್ಟ ದೊಡ್ಡಗಾತ್ರದ ಮೂರು ಆಯಾಮದ ಮೂರ್ತಿ ಸಹಿತವಾದ ಸುಂದರವಾದ ಅಸಂಖ್ಯಾತ ಕಂಬಗಳನ್ನು ಹೊಂದಿರುವ ದೇವಾಲಯದ ಒಳಭಾಗವನ್ನು ವರ್ಣಿಸಲಸಾಧ್ಯ. ಪುಷ್ಕರಣಿಯಂತೂ ಬಹಳ ಆಕರ್ಶಕವಾಗಿದೆ. ಎರಡು ಸಾವಿರದ ಐನೂರು ವರುಷಗಳ ಹಿಂದಿನ ಇತಿಹಾಸವಿರುವ ಈ ದೇವಾಲಯವನ್ನು ಪಾಂಡ್ಯರಾಜ ಕುಲಶೇಖರ ಪಾಂಡ್ಯ ನಿರ್ಮಿಸಿದನು(ಕ್ರಿ. ಶ.ಆರನೇ ಶತಮಾನ). ದೇವರ ಪೂಜಾ ಕಾರ್ಯಕ್ರಮವನ್ನು ವೀಕ್ಷಿಸಿ, ದೇವಾಲಯದ ಹೊರ ಅವರಣವನ್ನು ಸುತ್ತಿ(ಎರಡು ಕಿ.ಮಿ.)ಹಿಂದಿರುಗಿ ಮಠದಲ್ಲಿ ಬೆಳಗ್ಗಿನ ಉಪಹಾರವನ್ನು ಸೇವಿಸಿದೆವು. ನಂತರ ಸಭೆ ಸೇರಿ ನಮ್ಮ ನಮ್ಮ ಅನುಭವ ಮತ್ತು ಅನಿಸಿಕೆಗಳನ್ನು ಹಂಚಿಕೊಂಡೆವು. ಈ ಪ್ರವಾಸದ ರೂವಾರಿಗಳಾದ ರಮಾನಾಥ ಅಲ್ಸೆ ಮತ್ತು ಚಾಂತಾರು ಅಶೋಕ ಭಟ್ ಮತ್ತವರ ತಂಡಕ್ಕೆ ಹಾಗೂ ಬಸ್ಸಿನ ಚಾಲಕರಿಗೆ ನಮ್ಮ ವಂದನೆಗಳನ್ನು ಸಲ್ಲಿಸಿ ಊರಕಡೆಗೆ ಹೊರಟೆವು. ನಾಮಕಲ್ ಎನ್ನುವ ಊರಲ್ಲಿ ಮಧ್ಯಾಹ್ನದ ಭೋಜನವನ್ನು ಸವಿದು, ಪ್ರಯಾಣ ಮುಂದುವರಿಸಿದೆವು. ದಾರಿಯುದ್ದಕ್ಕೂ ಭಜನೆ ಹಾಡು, ಮನೋರಂಜನಾ ಆಟಗಳನ್ನು ಹಮ್ಮಿಕೊಂಡಿದ್ದೆವು. ರಾತ್ರಿಯ ಭೋಜನವನ್ನು(ಮೊಸರನ್ನ) ಬೆಂಗಳೂರು ಸಮೀಪ ಉಂಡು, ಬೆಳಿಗ್ಗೆ ಒಂಭತ್ತು ಗಂಟೆಗೆ ಬ್ರಹ್ಮಾವರ ತಲುಪಿದೆವು.

ದೇವಾಲಯಗಳ ಹಾಗೂ ಸಾಂಸ್ಕೃತಿಕ ನಗರಿ ಎಂದೇ ಖ್ಯಾತವಾದ ತಮಿಳುನಾಡಿನ ಒಂದನ್ನೊಂದು ಮೀರಿಸುವಂತಹ ಈ ದೇವಸ್ಥಾನಗಳು ತನ್ನದೇ ಆದ ವೈಶಿಷ್ಟ್ಯ ಹಾಗೂ ಭವ್ಯ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಕಾಲನ ಹೊಡೆತಕ್ಕೆ ಮತ್ತು ಮತಾಂಧರ ದಾಳಿಗೆ ಸಿಲುಕಿಯೂ ತನ್ನ ಸೌಂದರ್ಯವನ್ನು ಉಳಿಸಿಕೊಂಡಿರುವುದು ನಮ್ಮ ಭಾಗ್ಯ. ಸನಾತನ ಹಿಂದೂ ಸಂಸ್ಕೃತಿಯ ದಿವ್ಯ ದರುಷನ ನೀಡುವ, ಶಾಸ್ತ್ರೀಯ ಸಂಗೀತ ದಿಗ್ಗಜರ ಪರಂಪರೆಯನ್ನು ಹೊಂದಿರುವ ಇಲ್ಲಿನ ನೆಲದ ಇಂದಿನ ರಾಜಕೀಯ ಪುಢಾರಿಗಳಿಂದಲೇ ಇತ್ತೀಚೆಗೆ ಸನಾತನ ಹಿಂದೂ ಸಂಸ್ಕೃತಿಯ ಬಗ್ಗೆ ಅವಹೇಳನವಾಗಿರುವುದು ವಿಪರ್ಯಾಸವೇ ಸರಿ.





## ಬೆಂಗಳೂರಿನ ಕಂಬಳದಲ್ಲಿ ಚಿನ್ನದ ಪದಕ



ಬೆಂಗಳೂರಿನಲ್ಲಿ ನಡೆದ ಕಂಬಳದಲ್ಲಿ ನಂದಳಿಕೆ ಶ್ರೀಕಾಂತ್‌ರವರ ಕೋಣಗಳು ಹಗ್ಗ ಹಿರಿಯದಲ್ಲಿ ಪ್ರಥಮ ಸ್ಥಾನಗಳಿಸಿ ಚಿನ್ನದ ಪದಕ ಪಡೆಯಿತು.

ಶ್ರೀಕಾಂತ್ ಅವರು ನಮ್ಮ ಸ್ಥಾನಿಕ ಸಮಾಜದವರು, ಕಾರ್ಕಳ ತಾಲೂಕಿನ ನಂದಳಿಕೆ ಗ್ರಾಮದವರು. ನಂದಳಿಕೆ ದಿ। ಭುಜಂಗ ರಾವ್ ಮತ್ತು ಮೋಹಿನಿ ದಂಪತಿಯ ಪುತ್ರ ಮಣಿಪಾಲ್‌ನಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿದ್ದಾರೆ. ಅವರು ಬೆಂಗಳೂರಿನ ಕಂಬಳದಲ್ಲಿ ಪ್ರಶಸ್ತಿ ಪಡೆದಿರುವುದು ನಮ್ಮ ಸಮಾಜಕ್ಕೆ ಹೆಮ್ಮೆ.


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)



ಪ್ರೊ : ನಯನಾಭಿರಾಮ ಸ್ವಾಮಿ
ಮೊಬೈಲ್ : 9449101303, 9632500864

**ಉದಯಾದ್ರಿ ಕೇಟರರ್ಸ್**

ಉಮಾಮಹೇಶ್ವರ ಉದಯಾದ್ರಿ ಮಠ,
ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಹತ್ತಿರ,
"ಅಂಗೀರಸ", ಪಡುಬಿದ್ರಿ, ಉಡುಪಿ ಜಿಲ್ಲೆ.

ಮದುವೆ ಇನ್ನಿತರ ಸಮಾರಂಭಗಳಿಗೆ
ಶುಚಿರುಚಿಯಾದ ಅಡುಗೆ
ಮಾಡಿಕೊಡಲಾಗುವುದು.
ಶ್ರಾದ್ಧ ಮತ್ತು ಔರ್ಧ್ವದೈಹಿಕ ಕ್ರಿಯೆಗಳನ್ನು
ಅಲ್ಲದೇ ಇತರ ವೈದಿಕ ಕಾರ್ಯಕ್ರಮಗಳನ್ನು
ಕೂಡಾ ನಡೆಸಿಕೊಡಲಾಗುವುದು.
ಸಮಾಜಬಾಂಧವರು ಸದುಪಯೋಗ
ಪಡಿಸಿಕೊಳ್ಳಬಹುದು.

# ಮೇರು ಕಲಾವಿದ ಎರ್ಮಾಳು ಶ್ರೀ ವಾಸುದೇವ ರಾಯರ ಪರಿಚಯ

ಎರ್ಮಾಳು ವಾಸುದೇವ ರಾಯರು ದಿನಾಂಕ 13.08.1929ರಲ್ಲಿ ಎರ್ಮಾಳು ಗೋವಿಂದ ರಾವ್ ಮತ್ತು ಪದ್ಮಾವತಿ ದೇವಿಯವರ ಹಿರಿಯ ಮಗನಾಗಿ ಜನಿಸಿದರು. ಅಂದಿನ ಅನುಭವಿ ಯಕ್ಷಗಾನಪಟು ನಾಗಪ್ಪ ಶೆಟ್ಟಿಯವರಿಂದ ಯಕ್ಷಕಲೆಯ ಬಗ್ಗೆ ತಿಳುವಳಿಕೆ ಪಡೆದ ತಂದೆ ಗೋವಿಂದರಾಯರಿಂದ ಮತ್ತು ಯಕ್ಷಗಾನದ ಅರ್ಥಧಾರಿಗಳಾದ ಪೊಲ್ಯ ದೇಜಪ್ಪ ಶೆಟ್ಟಿಯವರಿಂದ ಯಕ್ಷಗಾನದ ಬಗ್ಗೆ ಪ್ರಥಮ ಮಾಹಿತಿ ಪಡೆದರು. ಎರ್ಮಾಳು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವಿದ್ಯಾಭ್ಯಾಸ ಕಲಿಯುತ್ತಿರುವಾಗಲೇ ಕೊನೆಯ ಎರಡು ವರ್ಷಗಳಲ್ಲಿ ಪೊಲ್ಯ ದೇಜಪ್ಪ ಶೆಟ್ಟರ ಯಕ್ಷಗಾನ ತರಗತಿಗಳಿಗೆ ಹೋಗಿ ಮೊದಲು "ಪುಂಗಿ" ಊದಿದ್ದು ಅಲ್ಲದೇ ಅನಂತರ 1944ರಲ್ಲಿ ಪೊಲ್ಯರಿಂದಲೇ "ಬಡಗು ತಿಟ್ಟಿನ" ಮದ್ದಳೆ ಮತ್ತು ಚೆಂಡೆವಾದನಗಳನ್ನು ಅಭ್ಯಾಸ ಮಾಡಿದರು. ಒಂದೆರಡು ವರುಷ ಅವರೊಡನೆ ಊರಪರವೂರ ತಾಳಮದ್ದಳೆ ಕೂಟಗಳಲ್ಲಿ "ಚೆಂಡೆ-ಮದ್ದಳೆ" ವಾದಕರಾಗಿ ಸೇವೆ ಸಲ್ಲಿಸಿದರು. 1963ರಲ್ಲಿ ಶ್ರೀಮತಿ ಜಯಲಕ್ಷ್ಮೀ ರಾವ್ ಇವರೊಂದಿಗೆ ವಿವಾಹವಾಯಿತು.

ಅಧ್ಯಾಪಕರಾಗಿ ಸರಕಾರಿ ಸೇವೆಯಲ್ಲಿರುವಾಗ 1948ರಲ್ಲಿ ಅರ್ಕುಳ ನಾರಾಯಣ ಶೆಟ್ಟಿಯವರಿಂದ "ತೆಂಕು ತಿಟ್ಟಿನ" ಮದ್ದಳೆ-ಚೆಂಡೆಯ ಪರಿಪೂರ್ಣ ಅಧ್ಯಯನ ಮಾಡಿದರು. ಹಿಮ್ಮೇಳ ವಾದನದ ಪರಿಪೂರ್ಣತೆಗಾಗಿ ಪಿಲಾರು ವೇದವ್ಯಾಸ ಉಡುಪರಿಂದ ಶಾಸ್ತ್ರೀಯ ಸಂಗೀತದ ಅಭ್ಯಾಸ ಮಾಡಿದರು. ತದನಂತರ ಪಲಿಮಾರಿನಲ್ಲಿ ಅವರ ಉದ್ಯೋಗದ ಕಾಲದಲ್ಲಿ ಪ್ರಸಿದ್ಧ ಸಂಗೀತ ವಿದ್ವಾಂಸ ಪಲಿಮಾರು ವಿಠಲ್ ಭಟ್‌ರವರ ಶಿಷ್ಯತ್ವವನ್ನು ಪಡೆದರು. ಇಲ್ಲಿ ಸಂಗೀತದ ಹಲವು ಮಜಲುಗಳನ್ನು ದಾಟಿ, ಯಕ್ಷಗಾನದ ಭಾಗವತರಾಗಿ ರೂಪುಗೊಂಡು, ನಂತರ ಪ್ರಸಿದ್ಧ ಕೀರ್ತನಕಾರ ಮತ್ತು ಯಕ್ಷಗಾನ ಪಟುವಾಗಿ ಬೆಳೆದರು. ಹರಿದಾಸ ಶ್ರೀ ರಾಮದಾಸ ಸಾಮಗರಿಂದ ತಬ್ಲಾವಾದನ ಕಲಿಕೆ ಮತ್ತು ಪಣಂಬೂರು ರಾಘವರಾವ್‌ರಿಂದ ತೆಂಕುತಿಟ್ಟಿನ ಯಕ್ಷಗಾನದ ಮುಖವರ್ಣಿಕೆಗಳ ಕುರಿತು ವಿಶೇಷ ಪರಿಣತಿಯನ್ನು ಸಾಧಿಸಿದರು.

ಸ್ವಂತ ಊರಾದ ಎರ್ಮಾಳಿಗೆ ವರ್ಗವಾಗಿ ಬಂದ ನಂತರ ಶ್ರೀಧರ ಶಾಸ್ತ್ರಿಗಳಿಂದ ತಬಲಾವಾದನದಲ್ಲಿ ಹೆಚ್ಚಿನ ಅಭ್ಯಾಸ ಮಾಡಿದರು. ಶಾಲೆಗಳಲ್ಲಿ ಮಕ್ಕಳಿಗೆ ಯಕ್ಷಗಾನ ಬಯಲಾಟ ಕಲಿಸುತ್ತಿರುವಾಗ ಸುರತ್ಕಲ್ ವೆಂಕಟರಮಣ ಐತಾಳರ ಒಡನಾಟದಿಂದ ತೆಂಕುತಿಟ್ಟಿನ ನಾಟ್ಯ ಕಲಿತು ನಂತರ ಪಡ್ರೆ ಚಂದುರವರ ಬಳಿ ನಾಟ್ಯದ ಕುರಿತು ಹೆಚ್ಚಿನ ಪರಿಣತಿ ಪಡೆದರು. ಬ್ರಹ್ಮಾವರದ ಭಾಷಾ ಸಾಹೇಬ ಮತ್ತು ಮೀರಾ ಸಾಹೇಬ ಸಹೋದರರಿಂದ ನಾಟಕದ ಬಣ್ಣಗಾರಿಕೆ ಕಲೆಯನ್ನು ಕರಗತಗೊಳಿಸಿದರು.

ಹಲವಾರು ತಾಳಮದ್ದಳೆಕೂಟಗಳಲ್ಲಿ, ಯಕ್ಷಗಾನ ಬಯಲಾಟಗಳಲ್ಲಿ ಭಾಗವತರಾಗಿ, ಮದ್ದಳೆಗಾರರಾಗಿ, ಚೆಂಡೆವಾದಕರಾಗಿ, ಬಣ್ಣಗಾರಿಕೆಯಲ್ಲಿ



ಹಾಗೂ ಸುತ್ತಮುತ್ತಲಿನ ಹಲವಾರು ಶಾಲಾ ವಾರ್ಷಿಕೋತ್ಸವಗಳಲ್ಲಿ ಬಣ್ಣಗಾರಿಕೆ ಹಾಗೂ ತಬಲವಾದಕರಾಗಿ ಸೇವೆ ಸಲ್ಲಿಸಿರುತ್ತಾರೆ. ಹರಿದಾಸ ರಾಮದಾಸ ಸಾಮಗ, ಶ್ರೇಣಿ ಗೋಪಾಲ ಕೃಷ್ಣ ಭಟ್, ಪೊಳಲಿ ಜಗದೀಶ ದಾಸರು, ಹೊಸಬೆಟ್ಟು ವಾದೀಶ ಆಚಾರ್ಯ ಮೊದಲಾದ ಹೆಸರಾಂತ ಹರಿದಾಸರಿಗೆ ಹರಿಕಥೆಗಳಲ್ಲಿ ತಬ್ಲಾವಾದಕರಾಗಿ ಸಹಕರಿಸಿದ್ದಾರೆ. ಕೆಲವು ಭಾಗವತರಿಗೆ ಮದ್ದಳೆಗಾರರಾಗಿ ಮಂಗಳೂರು ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಎರ್ಮಾಳು, ಫಲಿಮಾರು, ಕಾಂಜರಕಟ್ಟೆ, ಪಡುಬಿದ್ರೆ, ಹೆಜಮಾಡಿ, ಪೊಲಿಪು, ಕಾಪು, ಮಂಚಕಲ್ಲು, ಕಳತೂರು, ಕುತ್ಯಾರು, ಎಲ್ಲೂರು, ಉಚ್ಚಿಲ, ಯಕ್ಷಗಾನ ಸಂಘಗಳಲ್ಲಿ ತೆಂಕುತಿಟ್ಟಿನ ಭಾಗವತಿಕೆ, ಚೆಂಡೆ-ಮದ್ದಳೆ, ನೃತ್ಯ, ಬಣ್ಣಗಾರಿಕೆ, ಅರ್ಥಗಾರಿಕೆ ಇವುಗಳಲ್ಲಿ ತರಬೇತಿ ನೀಡಿ ಸಿದ್ಧಗೊಳಿಸಿದ್ದಾರೆ. ತೆಂಕ ಎರ್ಮಾಳು ಹಾಗೂ ಬಡಾ ಎರ್ಮಾಳು, ಪೊಲಿಪು, ಕಾಪು, ಹೆಜಮಾಡಿ, ಮೂಳೂರು, ಕೆಮುಂಡೇಲು ಭಜನಾ ಸಂಘಗಳಲ್ಲಿ ತಬಲಾವಾದನವನ್ನು ಕಲಿಸಿಕೊಟ್ಟಿರುತ್ತಾರೆ. ತೆಂಕ ಎರ್ಮಾಳು ಶ್ರೀರಾಮ ಮಂದಿರದಲ್ಲಿ ಆಟಿ ತಿಂಗಳಲ್ಲಿ (ಆಷಾಢ) ನಡೆಯುವ ಪುರಾಣ ವಾಚನದಲ್ಲಿ ಸುಮಾರು 21 ವರ್ಷಗಳ ಕಾಲ ವಾಚನಕಾರರಾಗಿ ಕಾರ್ಯನಿರ್ವಹಿಸಿದ್ದಾರೆ. "ನಾಲ್ವರ ಗರ್ವ ಭಂಗ", "ಗರಿಕಾ ಗಣೇಶ" ಮತ್ತು "ಶ್ರೀ ಸತ್ಯನಾರಾಯಣ" ಎಂಬ ಪ್ರಸಂಗಗಳುಳ್ಳ "ಯಕ್ಷಗುಚ್ಛ"ವೆಂಬ ಯಕ್ಷಗಾನ ಪ್ರಸಂಗ ಪುಸ್ತಕವನ್ನು "ಜಯಲಕ್ಷ್ಮೀ ಪ್ರಕಾಶನ" ಸಂಸ್ಥೆಯ ಮೂಲಕ ಅಚ್ಚು ಹಾಕಿಸಿದ್ದಾರೆ. ಈ ಪ್ರಸಂಗಗಳನ್ನು ಹಲವಾರು ಸಂಘ ಸಂಸ್ಥೆಗಳು ಯಕ್ಷಗಾನ ಬಯಲಾಟವಾಗಿ ಆಡಿದ್ದಾರೆ.

60 ವರ್ಷ ಕಲಾಮಾತೆಯ ಸೇವೆಯನ್ನು ಮಾಡಿದ್ದಕ್ಕಾಗಿ ಹಲವಾರು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿದೆ. ಇವರ ಆರು ಮಕ್ಕಳು, ಇವರಿಂದಲೇ ಪ್ರಾರಂಭಿಕ ಪಾಠವನ್ನು ಕಲಿತಿದ್ದಾರೆ ಮತ್ತು ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಯಕ್ಷಗಾನ, ಸಂಗೀತ, ನಾಟ್ಯ ಹಾಗೂ ತಬಲಾವಾದನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಹಾಗೂ ಹಲವಾರು ಶಿಷ್ಯರು ಕಲಾಪ್ರಕಾರಗಳಲ್ಲಿ ವಿದ್ವತ್ ಹಾಗೂ ಎಂ.ಎ. ಪದವಿಗಳನ್ನು ಪಡೆದುಕೊಂಡಿದ್ದಾರೆ. ಇದೀಗ ಇವರು 94 ವರ್ಷಗಳ ಸಂತೃಪ್ತ ಜೀವನವನ್ನು ನಡೆಸುತ್ತಿದ್ದಾರೆ. ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಅವರ ಈ ಅಸಾಮಾನ್ಯ ಸಾಧನೆಗಳು ಹಾಗೂ ಮೇರು ಕಲಾಸೇವೆಗಳನ್ನು ಗುರುತಿಸಿ ಅಭಿನಂದಿಸುತ್ತದೆ ಹಾಗೂ ಶ್ರೀ ಶಾರದಾ ಮಾತೆ ಅವರಿಗೆ ಆರೋಗ್ಯಪೂರ್ಣ ಶತಾಯುಷ್ಯವನ್ನು ಕರುಣಿಸಲಿ ಎಂದು ಹಾರೈಸುತ್ತದೆ.

# ರಾಯೀ ರಾಜಕುಮಾರರಿಗೆ ಸನ್ಮಾನ



ಮಂಗಳೂರು ಬಲ್ಮಠದ ಸರಕಾರಿ ಪದವಿ ಕಾಲೇಜಿನ ಸಭಾಂಗಣದಲ್ಲಿ ನಡೆದ ಮಂಗಳೂರು ಉತ್ತರ ಕ್ಷೇತ್ರದ ಶಿಕ್ಷಕರ ಹಿಂದಿ ದಿವಸ ಕಾರ್ಯಕ್ರಮದಲ್ಲಿ ಬ್ಯಾಂಕ್ ಆಫ್ ಬರೋಡಾದ ವತಿಯಿಂದ ರಾಜ್ಯ ಹಿಂದಿ ಶಿಕ್ಷಕರ ಸಂಘದ ಉಪಾಧ್ಯಕ್ಷ ರಾಜ್ಯ ಸಂಪನ್ಮೂಲ ವ್ಯಕ್ತಿ ಮೂಡುಬಿದಿರೆಯ ರಾಯೀ ರಾಜಕುಮಾರರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಜೇಮ್ಸ್ ಕುಟಿನ್ಹ, ರಾಜ್ಯ ಹಿಂದಿ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಎಂ. ರಾಠೋಡ್, ರಾಜ್ಯ ಸಂಪನ್ಮೂಲ ವ್ಯಕ್ತಿ ಅಶೋಕ್ ಪಾಟೀಲ್, ಹೈಸ್ಕೂಲು ಮುಖ್ಯ ಶಿಕ್ಷಕ ಅಬ್ದುಲ್ ಖಾದರ್, ಶಿಕ್ಷಕಿ ಶ್ರೀಮತಿ ಕವಿತಾ ಹಾಗೂ ಇತರ ಅತಿಥಿಗಳು ಸನ್ಮಾನಿಸಿದರು.

## ಪ್ರಕಟಣೆ

ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ ಇದರ ಯುವ ವೇದಿಕೆಯ ವತಿಯಿಂದ, ಸ್ಥಾನಿಕ ಬ್ರಾಹ್ಮಣ ಸಮಾಜದ ಯುವಕರಿಗೆ 10ನೇ ವರ್ಷದ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟ ಮತ್ತು ಮಹಿಳೆಯರಿಗೆ ಥ್ರೋ ಬಾಲ್ ಪಂದ್ಯಾಟ, ಪಣಂಬೂರು NMPT ಮೈದಾನದಲ್ಲಿ ದಿನಾಂಕ 28.01.2024ನೇ ಆದಿತ್ಯವಾರದಂದು ನಡೆಯಲಿದೆ. ಈ ಪಂದ್ಯಾಟದಲ್ಲಿ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇವೆ.

ಪಂದ್ಯಾಟದಲ್ಲಿ ಭಾಗವಹಿಸಲು ಇಚ್ಛಿಸುವ ತಂಡಗಳು ದಿನಾಂಕ 07.01.2024ರ ಮೊದಲು ತಮ್ಮ ಹೆಸರನ್ನು ಪ್ರವೀಣ್ – (9448953331), ಸಂದೀಪ್–(9844630306) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

–ಅಧ್ಯಕ್ಷರು ಮತ್ತು ಸದಸ್ಯರು, ಯುವವೇದಿಕೆ,
ಸ್ಥಾನಿಕ ಬ್ರಾಹ್ಮಣ ಸಂಘ ಸುರತ್ಕಲ್.

PRODUCTS ARE AVAILABLE AT ATTRACTIVE DISCOUNT PRICES



BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಸ್ಥಾನಿಕ ಮಹಾಮಂಡಲದ ಪದಾಧಿಕಾರಿಗಳಿಗೆ ಸನ್ಮಾನ



ತಾ.09.10.2023ರಂದು ಕೃಷಿ ಮೇಳ ಪಡುಬಿದ್ರಿ, ಇದರ ವತಿಯಿಂದ ಸ್ಥಾನಿಕ ಮಹಾಮಂಡಲದ ಪದಾಧಿಕಾರಿಗಳಿಗೆ ಸನ್ಮಾನ ಮಾಡಿದ ಸಂದರ್ಭ.

ಶ್ರೀ ಕ್ಷೇತ್ರ ಉದಯಾದ್ರಿ

### ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ದೇವಸ್ಥಾನ

**ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ - 574111**

ಪ್ರಿಯ ಭಗವದ್ಭಕ್ತರೆ,

ಸ್ವಸ್ತಿ ಶ್ರೀ ಶೋಭಕೃತ್ ನಾಮ ಸಂವತ್ಸರದ ಧನುರ್ಮಾಸ ದಿನ 29 ಸಲುವ ಮಾರ್ಗಶಿರ ಅಮಾವಾಸ್ಯೆ

**ದಿನಾಂಕ 11.01.2024 ಗುರುವಾರ ಎಳ್ಳಮಾವಾಸ್ಯೆ ಪ್ರಯುಕ್ತ**

### ಅಥರ್ವಶೀರ್ಷ ಸಹಸ್ರಮೋದಕ ಗಣಯಾಗ

ಜರಗಲಿರುವುದು. ಶ್ರೀ ದೇವತಾ ಕಾರ್ಯಕ್ರಮದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಜಗದಾಭಿರಾಮಸ್ವಾಮಿ** – ಅನುವಂಶಿಕ ಮೊಕ್ತೇಸರರು ಮತ್ತು ಪ್ರಧಾನ ಅರ್ಚಕರು
**ಪಿ.ಡಿ. ಶೇಖರ ರಾವ್** – ಅಧ್ಯಕ್ಷರು
**ಪಿ. ರಘುವೀರ ರಾವ್, ಕರುಣಾಕರ ಬೆಳ್ಳೆ** – ಗೌರವಾಧ್ಯಕ್ಷರು
**ಶ್ರೀನಿವಾಸ ಶರ್ಮ ಪಾದೆಬೆಟ್ಟು** – ಕೋಶಾಧ್ಯಕ್ಷರು
**ನಯನಾಭಿರಾಮ ಸ್ವಾಮಿ** – ಕಾರ್ಯದರ್ಶಿ

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತೀ ಟೆಂಪಲ್ ಟ್ರಸ್ಟ್ (ರಿ.)
ಮತ್ತು ಸರ್ವ ಸದಸ್ಯರು, ಊರ ಹತ್ತು ಸಮಸ್ತರು

**ಸಾಮೂಹಿಕ ರಂಗಪೂಜಾ ಸೇವೆಯು**
**ಅದೇ ದಿನ ಸಂಜೆ 6.30ರಿಂದ ಜರಗಲಿರುವುದು**

## ಮಹಾಮಂಡಲದ ಮುಂದಿನ ಚಟುವಟಿಕೆಗಳು

ತಾರೀಕು 19.11.2023ನೇ ಭಾನುವಾರ ಮಹಾಮಂಡಲದ ಆಡಳಿತ ಮಂಡಳಿ ಸದಸ್ಯರ ಪ್ರಥಮ ಸಭೆಯು ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಸ್ವಾಗತದ ನಂತರ ಮಹಾಸಭೆ ವರದಿ ಮಂಡಿಸಿ ಸಭೆಯ ಅನುಮೋದನೆ ಪಡೆಯಲಾಯಿತು. ಈ ವರ್ಷ ಪದಗ್ರಹಣ ಸಮಾರಂಭ ನಡೆಸದೇ ಇರಲು ನಿರ್ಧರಿಸಲಾಯಿತು. ಮುಂದಿನ ಮೂರು ವರ್ಷಗಳ ಅವಧಿಗೆ ಈ ಕೆಳಗಿನ ಗುರಿಯನ್ನು ಹಾಕಿಕೊಳ್ಳಲಾಯಿತು.

1. ಪ್ರಥಮವಾಗಿ ಮಾರ್ಚ್ 2024ರ ಒಳಗೆ ಎಲ್ಲಾ 19 ಸಂಘಗಳಿಗೆ ಭೇಟಿ.
2. ಸದಸ್ಯತ್ವ ಗುರಿ ಹೆಚ್ಚಳ.
3. ಪ್ರತಿಯೊಂದು ಸಂಘದಲ್ಲಿ ಮೂರು ವರ್ಷದಲ್ಲಿ ಒಮ್ಮೆ ಮಹಾಮಂಡಲದಿಂದ ಒಂದು ಕಾರ್ಯಕ್ರಮ ಏರ್ಪಡಿಸುವುದು. (ಆಯಾಯ ಸಂಘ ಮತ್ತು ದಾನಿಗಳ ನೆರವಿನಿಂದ).
   ಉದಾ- ವೈದ್ಯಕೀಯ ಶಿಬಿರ, ವೈದಿಕ ಶಿಬಿರ, ಸಾಂಸ್ಕೃತಿಕ ಕಾರ್ಯಕ್ರಮ, ಸಾಧಕರಿಗೆ ಸನ್ಮಾನ ಇತ್ಯಾದಿ.
4. 19 ಸಂಘದ ಅತೀ ಬಡವರನ್ನು ಗುರುತಿಸಿ ಆಯಾಯ ಸಂಘ ಮತ್ತು ಮಹಾಮಂಡಲ ಹಾಗೂ ದಾನಿಗಳ ನೆರವಿನಿಂದ ಈ ಕೆಳಗಿನ ಕಾರ್ಯಕ್ರಮ ನಡೆಸುವುದು.
   ಅ. ಸಂಪೂರ್ಣ ವೈದ್ಯಕೀಯ ವೆಚ್ಚ.
   ಆ. ಜಾಗವಿದ್ದು ಮನೆಕಟ್ಟಲು ಅಸಕ್ತರಿಗೆ ಸಣ್ಣ ಮೊತ್ತದ (5-6 ಲಕ್ಷದ ಮನೆ ನಿರ್ಮಾಣ.)
   ಇ. ವಿದ್ಯಾಭ್ಯಾಸ ಖರ್ಚನ್ನು ಕಡಿಮೆ ಆದಾಯ ಹಾಗೂ ಅಗತ್ಯವಿದ್ದವರಿಗೆ ನೀಡುವುದು.
   ಈ. ಬಡವರ ಮದುವೆಗೆ ಸಹಕಾರ. ಇತ್ಯಾದಿ.
5. ಎಲ್ಲಾ ಸಂಘಗಳಲ್ಲಿ ನಮ್ಮವರೇ ಡಾಟ ಎಂಟ್ರಿ.
6. ನಮ್ಮವರು ದೇವಸ್ಥಾನದಲ್ಲಿ ಕೆಲಸದಲ್ಲಿದ್ದು ಏನಾದರೂ ಸಮಸ್ಯೆ ಇದ್ದರೆ ಸರಿಪಡಿಸುವ ಪ್ರಯತ್ನ ಹಾಗೂ ಅವರಿಗೆ ಧೈರ್ಯ ತುಂಬುವ ಕೆಲಸ.
7. ಸಮ್ಮೇಳನ ಎರಡು ವರ್ಷಕ್ಕೊಮ್ಮೆ.
8. ಅದ್ವೈತ ಸಿದ್ಧಾಂತದ ಬಗ್ಗೆ ಹೆಚ್ಚು ಒತ್ತು ಕೊಡುವುದು.
9. ಎಲ್ಲಾ ಕಾರ್ಯಕ್ರಮಗಳಿಗೆ ಸಂಪನ್ಮೂಲ ಕ್ರೋಢೀಕರಿಸುವುದು.

ಮುಂದಿನ ಸಭೆ ಫೆಬ್ರವರಿ ತಿಂಗಳಲ್ಲಿ ಉಡುಪಿಯಲ್ಲಿ ನಡೆಸುವುದೆಂದು ನಿರ್ಣಯಿಸಲಾಯಿತು. ಧನ್ಯವಾದದೊಂದಿಗೆ ಸಭೆ ಮುಕ್ತಾಯಗೊಂಡಿತು. ಈ ಸಭೆಯಲ್ಲಿ ಅಧ್ಯಕ್ಷರು, ನಿಕಟ ಪೂರ್ವ ಅಧ್ಯಕ್ಷರು, ಸ್ಥಾಪಕ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ, ಜೊತೆ ಕಾರ್ಯದರ್ಶಿ ಸೇರಿ 12 ಜನ ಭಾಗಿಯಾಗಿದ್ದರು. ಸ್ಥಳಾವಕಾಶ ಮತ್ತು ಉಪಹಾರವನ್ನು ಮಂಗಳೂರು ಸಂಘದವರು ನೀಡಿ ಸಹಕರಿಸಿದ್ದರು.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣ ರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ




ಕೆ. ದಿನಮಣಿ ಶಾಸ್ತ್ರೀ ಮೊಬೈಲ್ : 8277190632 9482284970

ಚಿತ್ತಾರ ಫೋಟೋ ಆರ್ಟ್

ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವೀಡಿಯೋಗಾಗಿ ಕರೆಮಾಡಿ

ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ-576213.

Ph : 98459 92859

Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com



## ಶುಭ ಜನನ

ಉಜಿರೆ ಸುಬ್ಬರಾವ್ ಮತ್ತು ಶ್ರೀಮತಿ ರಶ್ಮಿ (ಉಡುಪಿ ಸಂಘದ ಜತೆ ಕಾರ್ಯದರ್ಶಿ ಟಿ. ಜಗದೀಶ್ ರಾವ್ ಮತ್ತು ಸುಂದರಿಯವರ ಮಗಳು) ಅವರಿಗೆ ತಾ.05–10–2023ರಂದು ಹೆಣ್ಣು ಮಗುವಿನ ಜನನ.

**** ****

ಪೆರ್ಡೂರು ಆಶ್ಲೇಷ್ ಮತ್ತು ಶ್ರೀಮತಿ ರಮ್ಯ ಅವರಿಗೆ ತಾ. 25.10.2023 ರಂದು ಹೆಣ್ಣು ಮಗುವಿನ ಜನನ.

## ನಿಧನ



ಅಂಬಲ್ಪಾಡಿ ನಿವಾಸಿ ಎಚ್.ಎನ್. ಶಾನುಭಾಗ್ ಅವರ ಪತ್ನಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇದರ ಮಹಿಳಾ ವೇದಿಕೆಯಲ್ಲಿ ಸಕ್ರಿಯರಾಗಿದ್ದ ಶ್ರೀಮತಿ ಮಹಾಲಕ್ಷ್ಮಿ ಶಾನುಭಾಗ್‌ರವರು 64ನೇ ವಯಸ್ಸಿನಲ್ಲಿ ತಾ. 30.11.2023ರಂದು ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಅವರು ಪತಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

**** ****



ಪಾಂಡವಪುರ ವೆಂಕಟರಾವ್ ಅವರ ಧರ್ಮಪತ್ನಿ ಶ್ರೀಮತಿ ಅರುಂಧತಿ ರಾವ್‌ರವರು 71ನೇ ವಯಸ್ಸಿನಲ್ಲಿ ತಾ.16.11.2023 ರಂದು ಪುತ್ತೂರಿನ ಶಿವಸದನದಲ್ಲಿ ನಿಧನರಾದರು.

**** ****



ಕಾರ್ಕಳ ದಿವಾಕರ ರಾವ್ ಅವರ ಪತ್ನಿ ಶ್ರೀಮತಿ ವಾಣಿ ಅವರು 68ನೇ ವಯಸ್ಸಿನಲ್ಲಿ ತಾ.18.11.2023ರಂದು ಬೆಂಗಳೂರಿನಲ್ಲಿ ನಿಧನರಾದರು. ಅವರು ಪತಿ ಮತ್ತು ಒಬ್ಬಳು ಮಗಳನ್ನು ಅಗಲಿದ್ದಾರೆ.

**** ****



ರಮೇಶ್ ಮಧೂರು (ಕಾಸರಗೋಡು ಜಿಲ್ಲೆಯವರು) 57ನೇ ವಯಸ್ಸಿನಲ್ಲಿ ತಾ.21–11–2023 ರಂದು ನಿಧನರಾದರು. ಅವರು ಪತ್ನಿಯನ್ನು ಅಗಲಿದ್ದಾರೆ.

**** ****



ಭಾಸ್ಕರ ರಾವ್ ಅನಾರು(80 ವರ್ಷ) ತಾ.25.11.2023ರಂದು ಸ್ವಗೃಹದಲ್ಲಿ ನಿಧನರಾದರು. ಅವರು ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

**** ****



ರಾಧಾಕೃಷ್ಣ ರಾವ್ ಎನ್.ಎಂ. ಅವರು 86ನೇ ವಯಸ್ಸಿನಲ್ಲಿ ತಾ.27.11.2023 ರಂದು ನೆಟ್ಲಾ (ನಿಟಿಲಾಪುರ) ದಲ್ಲಿ ನಿಧನರಾದರು. ಅವರು ಪತ್ನಿ, ಪುತ್ರ ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.

**** ****



ದಿ। ಅನಾರು ಭಾಸ್ಕರ್ ರಾವ್ ಅವರ ಪತ್ನಿ ಶ್ರೀಮತಿ ದೇವಕಿ ಅವರು 70ನೇ ವಯಸ್ಸಿನಲ್ಲಿ ತಾ.01.12.2023ರಂದು ಅನಾರುವಿನಲ್ಲಿ ನಿಧನರಾದರು. ಅವರು ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

**** ****



ಶುಂಠಿಪಾಡಿ ಸಂತೋಷ್ ಅವರು 73ನೇ ವಯಸ್ಸಿನಲ್ಲಿ ತಾ.04.12.2023 ರಂದು ಮೈಸೂರಿನಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಮೂಲತ: ಕಡಬ ಮುಳಿಮಜಲು ನಿವಾಸಿ, ಪ್ರಸ್ತುತ ಉಡುಪಿಯ ಕುಂಜಿಬೆಟ್ಟು ಬೈಲಕೆರೆಯಲ್ಲಿ ವಾಸ್ತವ್ಯವಿದ್ದ ಕೆನರಾ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಗೋಪಾಲಕೃಷ್ಣ ಕೋಲ್ಪೆ (82) ಅವರು ಉಡುಪಿಯಲ್ಲಿ ನವೆಂಬರ್ 26 ರಂದು ನಿಧನ ಹೊಂದಿದರು. ಮೃತರು ಪತ್ನಿ, ಪುತ್ರ ಕಡಬದ ಔಷಧ ಉದ್ಯಮಿ ರಾಜೇಶ್ ಕೋಲ್ಪೆ ಹಾಗೂ ಪುತ್ರಿ ಉಡುಪಿ ನಗರಸಭಾ ಸದಸ್ಯೆ ರಜನಿ ಹೆಬ್ಬಾರ್ ಅವರನ್ನು ಅಗಲಿದ್ದಾರೆ. ಮಂಗಳೂರು, ಗೋವಾ, ಧಾರವಾಡ, ಶಿಕಾರಿಪುರ, ಮೂಡಿಗೆರೆ, ಆಗ್ರಾ ಮುಂತಾದೆಡೆ ಕೆನರಾ ಬ್ಯಾಂಕ್ ಶಾಖೆಗಳಲ್ಲಿ ಕಾರ್ಯನಿರ್ವಹಿಸಿದ್ದ ಅವರು ಹಾಸನ ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿ ಸ್ವಯಂ ನಿವೃತ್ತಿ ಪಡೆದಿದ್ದರು. ಕಡಬ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ, ಉಡುಪಿ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಅವರು ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ಅಧ್ಯಕ್ಷರು ಮತ್ತು ಸರ್ವಸದಸ್ಯರು ಹಾಗೂ ಸ್ಥಾನಿಕ ಮಹಾಮಂಡಲ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

**** ****



ಉಪನ್ಯಾಸಕ, ಹವ್ಯಾಸಿ ಯಕ್ಷಗಾನ ಕಲಾವಿದ, ಅರ್ಥಧಾರಿ, ಗಮಕಿ, ಕೀರ್ತನಕಾರ, ಪ್ರವಚನಕಾರ, ಲೇಖಕ ಹೀಗೆ ಸಾಂಸ್ಕೃತಿಕ ದೃಷ್ಟಿಯಿಂದ ಬಹುಮುಖಿಯಾಗಿ ತೊಡಗಿಸಿಕೊಂಡಿದ್ದ ಮರೂರು ನಾರಾಯಣ ಹೆಬ್ಬಾರ್ ಅವರು 83ನೇ ವಯಸ್ಸಿನಲ್ಲಿ ತಾ.15.11.2023 ರಂದು ನಿಧನರಾದರು. ಅವರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ಎಲ್ಲಾ ಕಾರ್ಯಕ್ರಮಗಳಲ್ಲಿ ಅಪಾರ ಸೇವೆ ಸಲ್ಲಿಸಿರುತ್ತಾರೆ. ಅಂಬಲಪಾಡಿ ಲಕ್ಷ್ಮೀಜನಾರ್ದನ ಯಕ್ಷಗಾನ ಕಲಾಮಂಡಳಿಯ ಆನಂದ ಗಾಣಿಗ ಪ್ರಶಸ್ತಿ, ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯೂ ಸೇರಿದಂತೆ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದರು. ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರ.) ಉಡುಪಿಯ ಅಧ್ಯಕ್ಷರು ಮತ್ತು ಸರ್ವಸದಸ್ಯರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-00ರಿಂದ

**ತಾ.30-12-2023 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.10-01-2024** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

**ತಾ.17-12-2023, 01.01.2024 ಹಾಗೂ 15.01.2024 ಪಂಚಮಿಯಂದು ''ನಾಗದೇವರಿಗೆ ತನುಸೇವೆ''** ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಧನು ಮಾಸದ ವಿಶೇಷ ದಿನಗಳು

| | | | |
|---|---|---|---|
| 16.12.2023 | ಧನು ಸಂಕ್ರಮಣ | 01.01.2024 | 2024ನೇಯ ಹೊಸ ವರ್ಷಾರಂಭ |
| 18.12.2023 | ಚಂಪಾ ಷಷ್ಠಿ, ಸುಬ್ರಹ್ಮಣ್ಯ ಷಷ್ಠಿ | 07.01.2024 | ಸರ್ವೈಕಾದಶಿ ಸಫಲಾ |
| 22.12.2023 | ಸ್ಮಾರ್ತೈಕಾದಶೀ | 11.01.2024 | ಎಳ್ಳಮಾವಾಸ್ಯೆ |
| 23.12.2023 | ಭಾಗವತ–ವೈಷ್ಣವೈಕಾದಶೀ, ಗೀತಾ ಜಯಂತಿ | 12.01.2024 | ಹೇಮಂತ ಋತು ಪುಷ್ಯ ಮಾಸದ ಶುಕ್ಲ ಪಕ್ಷಾರಂಭ |
| 26.12.2023 | ಹುಣ್ಣಿಮೆ | 14.01.2024 | ಮಕರ ಸಂಕ್ರಮಣ, ಉತ್ತರಾಯಣ ಆರಂಭ |
| 27.12.2023 | ಹೇಮಂತ ಋತು ಮಾರ್ಗಶಿರ ಮಾಸದ ಕೃಷ್ಣ ಪಕ್ಷಾರಂಭ | 15.01.2024 | ಉಡುಪಿ ಚೂರ್ಣೋತ್ಸವ |
| | | 16.01.2024 | ಕಿರು ಷಷ್ಠೀ |
| 30.12.2023 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 9.13ಕ್ಕೆ | 18.01.2024 | ಉಡುಪಿ ಶ್ರೀ ಪುತ್ತಿಗೆ ಮಠದ ಪರ್ಯಾಯೋತ್ಸವ |

## ಶುಭ ವಿವಾಹ

ಶ್ರೀಮತಿ ಸುಮಂಗಲಾ ಮತ್ತು ಗುರುರಾಜ್ ಪಲ್ಲಿಗುಡ್ಡೆ ರಾಣೆಬೆನ್ನೂರು ದಂಪತಿಯ ಪುತ್ರ **ಚಿ। ಅಮೋಘ್** ಅವರ ವಿವಾಹವು ಶ್ರೀಮತಿ ಸುಧಾ ಮತ್ತು ವೇಣುಗೋಪಾಲ್ ದಂಪತಿಯ ಪುತ್ರಿ **ಚಿ। ಸೌ। ನೇಹಾ**ರವರೊಂದಿಗೆ ತಾ.19.11.2023 ರಂದು ಬೆಂಗಳೂರಿನ ಜಸ್ಮಾದೇವಿ ಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಜರಗಿತು.

**** ****

ಹಿರಿಯಡ್ಕ ಆಲುಗ್ಗೇಲು ವಾಸುದೇವ ರಾವ್ ಮತ್ತು ಶ್ರೀಮತಿ ಜಾಹ್ನವಿ ರಾವ್ ದಂಪತಿಯ ಪುತ್ರ **ಚಿ। ಶಿವರಾಮ ರಾವ್** ಅವರ ವಿವಾಹವು ಸತ್ಯನಾರಾಯಣ ಭಟ್ ಮತ್ತು ಶ್ರೀಮತಿ ಗಾಯತ್ರಿ ಭಟ್ ದಂಪತಿಯ ಪುತ್ರಿ **ಚಿ। ಸೌ। ಶಾಶ್ವತಿ**ರವರೊಂದಿಗೆ ತಾ.19.11.2023ರಂದು ವಲ್ಲೀಶ ಸಭಾಭವನ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಜರಗಿತು.

**** ****

ಶ್ರೀಮತಿ ಸ್ವಪ್ನಾ ಜೆ. ಮತ್ತು ಬೆಳ್ಮಣ್ಣು ಜಯಚಂದ್ರ ಬಿ.ವಿ. ದಂಪತಿಯ ಪುತ್ರಿ **ಚಿ। ಸೌ। ನಿಖಿತಾ** ಅವರ ವಿವಾಹವು ಶ್ರೀಮತಿ ಅರ್ಚನಾ ಆಚಾರ್ಯ ಮತ್ತು ಅಡ್ಡೆ ರಮಾನಂದ್ ಆಚಾರ್ಯ ದಂಪತಿಯ ಪುತ್ರ **ಚಿ। ನಿಹಾಲ್**‌ರವರೊಂದಿಗೆ ತಾ.19.11.2023ರಂದು ವನಿತಾ ಅಚ್ಯುತ ಪೈ ಕನ್ವೆನ್ಷನ್ ಸೆಂಟರ್ ಮಂಗಳೂರಿನಲ್ಲಿ ಜರಗಿತು.

**** ****

ಶ್ರೀಮತಿ ಮಮತಾ ಮತ್ತು ಡಾ। ಕುಮಾರಸ್ವಾಮಿ ದಂಪತಿಯ ಪುತ್ರ **ಚಿ। ಕಾರ್ತಿಕ್** ಅವರ ವಿವಾಹವು ಶ್ರೀಮತಿ ಪ್ರಭಾ ಮತ್ತು ಅಶೋಕ ರಾವ್ ದಂಪತಿಯ ಪುತ್ರಿ **ಚಿ। ಸೌ। ಅಪೂರ್ವ**ರವರೊಂದಿಗೆ ತಾ.20.11.2023ರಂದು ಒಕ್ಕಲಿಗ ಗೌಡ ಸಭಾಂಗಣ ಪುತ್ತೂರಿನಲ್ಲಿ ಜರಗಿತು.

**** ****

ಎಂ. ನರಹರಿ ಹೆಬ್ಬಾರ್ ಮತ್ತು ಶ್ರೀಮತಿ ಸುಗಂಧಿನಿ ದಂಪತಿಯ ಪುತ್ರ **ಚಿ। ಮಧುನೀತ್** ಅವರ ವಿವಾಹವು ಅಶೋಕ್ ಕುಮಾರ್ ಮತ್ತು ಶ್ರೀಮತಿ ಇಂಧು ದಂಪತಿಯ ಪುತ್ರಿ **ಚಿ। ಸೌ। ನಮ್ರತಾ**ರವರೊಂದಿಗೆ ತಾ.24.11.2023ರಂದು ಬೆಂಗಳೂರಿನ ಚಾಮರಾಜ್ ವಜ್ರ ಮರಕತ ಗ್ಲಾಸ್ ಹೌಸ್‌ನಲ್ಲಿ ಜರಗಿತು.

**** ****

ಅದ್ಯಪಾಡಿ ಭಾಗ್ಯಚಂದ್ರರಾವ್ ಮತ್ತು ಶ್ರೀಮತಿ ಪೂರ್ಣಿಮಾ (ಕೋಣನಕುಂಟೆ–ಬೆಂಗಳೂರು) ದಂಪತಿಯ ಪುತ್ರ **ಚಿ। ಅಕ್ಷಯ್** ಅವರ ವಿವಾಹವು ಕೆ. ಶ್ರೀಹರಿ ಮತ್ತು ಶ್ರೀಮತಿ ಅನುರಾಧ ದಂಪತಿಯ ಪುತ್ರಿ **ಚಿ। ಸೌ। ಹರ್ಷಿತಾ**ರವರೊಂದಿಗೆ ತಾ.24.11.2023ರಂದು ಬಾಲನ್ ಫಾರ್ಮ್ ಜೆ.ಪಿ.ನಗರದಲ್ಲಿ ಜರಗಿತು.

**** ****

ಅಂಬಲ್ಪಾಡಿ ಶ್ರೀಪತಿ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮಿ ಎಸ್. ರಾವ್ ದಂಪತಿಯ ಪುತ್ರ **ಚಿ। ಕಾರ್ತಿಕ್** ಅವರ ವಿವಾಹವು ಕುಕ್ಕೆಹಳ್ಳಿ ದಿನೇಶ್ ಎಸ್. ರಾವ್ ಮತ್ತು ಶ್ರೀಮತಿ ತಾರಾ ದಿನೇಶ್ ರಾವ್ ದಂಪತಿಯ ಪುತ್ರಿ **ಚಿ। ಸೌ। ಅಂಕಿತಾ** ರವರೊಂದಿಗೆ ತಾ.29.11.2023ರಂದು ಉಡುಪಿಯ ಶ್ರೀ ಸುರಕ್ಷಾ ಸಭಾಭವನ ಪರ್ಕಳದಲ್ಲಿ ಜರಗಿತು.

**** ****

ಶ್ರೀಮತಿ ರಶ್ಮಿ ಮತ್ತು ವೀರೇಶ್ ಎಸ್. ರಾವ್ ದಂಪತಿಯ ಪುತ್ರಿ **ಚಿ। ಸೌ। ಅದಿತಿ** ಅವರ ವಿವಾಹವು ಶ್ರೀಮತಿ ಜಯಶ್ರೀ ಮತ್ತು ಪ್ರಕಾಶ್ ಶ್ರೀನಿವಾಸ ಹೆಬ್ಬಾರ್ ದಂಪತಿಯ ಪುತ್ರ **ಚಿ। ಈಶ್ವರ್**ರವರೊಂದಿಗೆ ತಾ.06.12.2023 ರಂದು ಶ್ರೀ ಜ್ಞಾನಶಕ್ತಿ ಮಂಟಪ ಕೊಡಿಗೇಹಳ್ಳಿ ಬೆಂಗಳೂರಿನಲ್ಲಿ ಜರಗಿತು.

## ಸುಕುಮಾರ ಆಲಂಪಾಡಿಯವರ "ಜ್ಯೋತಿಷ್ಯ ಸಾರಕೋಶ"ದ ಬಿಡುಗಡೆ




ಕಾಸರಗೋಡಿನ ಸುಜೀವ ಪ್ರಕಾಶನ ಹಾಗೂ ಮಂಗಳೂರಿನ ಸಾಹಿತ್ಯ ಕೇಂದ್ರದ ಜಂಟಿ ಆಶ್ರಯದಲ್ಲಿ ಕಾಸರಗೋಡಿನ ಪ್ರಸಿದ್ಧ ಜ್ಯೋತಿಷಿ ಸುಕುಮಾರ ಆಲಂಪಾಡಿಯವರ "ಜ್ಯೋತಿಷ್ಯ ಸಾರಕೋಶ" (ಜ್ಯೋತಿಷ್ಯದ ಕುರಿತಾದ ಸಮಗ್ರ ಚಿಂತನೆ, ಪದಕೋಶ ಹಾಗೂ ಮಾಹಿತಿ ಕೋಶ) ಎಂಬ ಕೃತಿಯನ್ನು ವೈದಿಕರೂ ಸಂಸ್ಕೃತ ವಿದ್ವಾಂಸರೂ ಆದ ಡಾ.ಸತ್ಯಕೃಷ್ಣ ಭಟ್ ಇತ್ತೀಚೆಗೆ ಮಂಗಳೂರಿನ ಮಂಗಳ ಸಭಾ ಭವನದಲ್ಲಿ ಬಿಡುಗಡೆಗೊಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರಿನ ಹಿರಿಯ ವೈದಿಕ ವಿದ್ವಾಂಸರು ಹಾಗೂ ಪಂಡಿತ ಪಂಚಾಂಗಕರ್ತರಾದ ಪಂಡಿತ ನರಸಿಂಹ ಆಚಾರ್ಯರು ವಹಿಸಿದ್ದರು. ಹಿರಿಯ ಜ್ಯೋತಿಷಿ ತೆಕ್ಕುಂಜೆ ಜಯಶಂಕರ ಭಟ್ ಶುಭಾಶಂಸನೆಗೈದರು. ಡಾ. ಶೋಭಿತ ಸತೀಶ್ ಸ್ವಾಗತಿಸಿ, ಸಾಹಿತ್ಯ ಕೇಂದ್ರದ ರತ್ನಾಕರ್ ಧನ್ಯವಾದಗೈದರು.

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು

ತಾ.19.11.2023ನೇ ಆದಿತ್ಯವಾರ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು ಇದರ ಆಡಳಿತ ಮಂಡಳಿ ಸದಸ್ಯರ ಪ್ರಥಮ ಸಭೆ ಮಂಗಳೂರಿನ ಕೇಂದ್ರ ಕಚೇರಿಯಲ್ಲಿ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಂದಿನ ಮೂರು ವರ್ಷಗಳ ಅವಧಿಗೆ ಹಲವಾರು ಯೋಜನೆಗಳನ್ನು ಹಾಕಿಕೊಳ್ಳಲಾಯಿತು. ಎಲ್ಲಾ 19 ಸ್ಥಾನಿಕ ಸಂಘಗಳನ್ನು ಭೇಟಿ ಮಾಡುವ ಜೊತೆಗೆ ಸದಸ್ಯತ್ವ ಅಭಿಯಾನದ ಗುರಿಯನ್ನು ಹಾಕಿಕೊಳ್ಳಲಾಯಿತು. ಆರ್ಥಿಕವಾಗಿ ಹಿಂದುಳಿದ ಸಮಾಜಭಾಂದವರಿಗೆ ಮದುವೆ, ವಿದ್ಯಾಭ್ಯಾಸ, ಮನೆ ಕಟ್ಟಲು ಆರ್ಥಿಕ ಸಹಾಯ ನೀಡಲು ನಿರ್ಧರಿಸಲಾಯಿತು. ಅದ್ವೈತ ಸಿದ್ಧಾಂತದ ಬಗ್ಗೆ ಒತ್ತುಕೊಡಲು ನಿರ್ಧರಿಸಲಾಯಿತು.



ತಾ. 26.11.2023ನೇ ಆದಿತ್ಯವಾರ ಸಂಜೆ 4-00 ಕ್ಕೆ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಂಘ ಬಾರಕೂರು ಇದರ ತಿಂಗಳ ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನಿಕ ಮಹಾಮಂಡಲದ ಪದಾಧಿಕಾರಿಗಳು ಭಾಗವಹಿಸುವ ಮೂಲಕ ಮಹಾಮಂಡಲದ ಮುಂದಿನ ಗುರಿ ಹಾಗೂ ಬ್ರಹ್ಮಾವರ ಸಂಘದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಮಹಾಮಂಡಲದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಮುಂದಿನ 3 ವರ್ಷಗಳ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು.



ತಾ. 02.12.2023 ನೇ ಶನಿವಾರ ಸಂಜೆ 3-00 ಘಂಟೆಗೆ ಬಂಟ್ವಾಳ ವಲಯ-ವಿಟ್ಲ ಸಂಘದ ಆಡಳಿತಮಂಡಳಿಯ ಸಭೆ ಅಧ್ಯಕ್ಷರಾದ ಭವಾನಿಶಂಕರ ರಾಯರ ಮನೆಯಲ್ಲಿ ಜರಗಿತು. ಸ್ಥಾನಿಕ ಬ್ರಾಹ್ಮಣ ಮಹಾ ಮಂಡಳಿಯ ಪದಾಧಿಕಾರಿಗಳು ಭಾಗವಹಿಸಿ ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಕಾರ್ಯಕ್ರಮಗಳ ಪಟ್ಟಿಯನ್ನು ಅಧ್ಯಕ್ಷರಾದ ಮಂಜುನಾಥ ಹೆಬ್ಬಾರ್ ಹಸ್ತಾಂತರಿಸಿದರು.






## ಕು. ವರ್ಷಿಣಿ



ಮಣಿಪಾಲ MAHE MSAP ಆರ್ಕಿಟೆಕ್ಚರ್ ಮಹಾವಿದ್ಯಾಲಯ ವಿದ್ಯಾರ್ಥಿನಿ ಕು. ವರ್ಷಿಣಿ ವಿಟ್ಲ B.des ಇಂಜಿನಿಯರಿಂಗ್ ಡಿಸೈನಿಂಗ್ ವಿಭಾಗದಲ್ಲಿ CGPA 9.3 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದು, ಎರಡು ಬಾರಿ ಬ್ಯಾಚ್ ಟಾಪರ್ ಪ್ರಶಸ್ತಿ ಪಡೆದಿದ್ದಾಳೆ. ಪ್ರಸ್ತುತ TOTAL INTERIER COLLABRATE (TIC) ಕುವೈಟ್‌ನಲ್ಲಿ ಉದ್ಯೋಗದಲ್ಲಿದ್ದಾಳೆ. ಇವಳು ಕುವೈಟ್‌ನಲ್ಲಿರುವ ರಾಜೇಶ್ ವಿಟ್ಲ ಮತ್ತು ಶ್ರೀಮತಿ ವಿದ್ಯಾರವರ ಸುಪುತ್ರಿ ಹಾಗೂ ಎನ್.ಬಿ. ನಾಗೇಶ್ ರಾವ್ ಮತ್ತು ಶ್ರೀಮತಿ ವಸಂತಿ ದಂಪತಿಗಳ ಹಾಗೂ ಕೌಳಿಗೆ ಗಿರಿಧರ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ದಂಪತಿಗಳ ಮೊಮ್ಮಗಳು.

## ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದಿಂದ ಅಭಿನಂದನೆ



ದಿನಾಂಕ 29.10.2023 ರವಿವಾರ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇಲ್ಲಿ ದಸರಾ ಪ್ರಯುಕ್ತ ನಡೆದ ನಾಡಹಬ್ಬದಂದು "ಶ್ರೀ ಸುಬ್ರಹ್ಮಣ್ಯ ಸಭಾ ಯಕ್ಷಗಾನ ಮಂಡಳಿ"ಯ ಕಲಾವಿದ/ಕಲಾವಿದೆಯರನ್ನು "ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ"ದ ವತಿಯಿಂದ ಶ್ರೀಮತಿ ಮತ್ತು ಶ್ರೀ ಸೌಭದ್ರಾ ಸದಾಶಿವ ಶಾಸ್ತ್ರಿ ದಂಪತಿಗಳು ಅಭಿನಂದಿಸಿದರು. ಹಾಗೂ ಯಕ್ಷಗಾನ ಮಂಡಳಿಯ ಕಲಾವಿದ/ಕಲಾವಿದೆಯರಿಂದ ಅಭಿನಂದಿಸಲಾಯಿತು.

## ಕೊಕ್ರಾಡಿ ಶ್ರೀ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವಠಾರ ಶುಚಿತ್ವ



ಕೊಕ್ರಾಡಿ ಶ್ರೀ ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವಠಾರ ಶುಚಿತ್ವವನ್ನು ಷಷ್ಠಿ ಮಹೋತ್ಸವಕ್ಕೆ ಪೂರ್ವಭಾವಿಯಾಗಿ ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ, ಬೆಳ್ತಂಗಡಿ ಇದರ ಸುಮಾರು 50 ಸದಸ್ಯರು ದಿನಾಂಕ 10-12-2023ರಂದು ಶ್ರಮದಾನದ ಮೂಲಕ ನೆರವೇರಿಸಿದರು. ಆಡಳಿತ ಮೊಕ್ತೇಸರರಾದ ಅರುಣಕುಮಾರ್ ಹಾಗೂ ಅರ್ಚಕರಾದ ಸುಬ್ರಹ್ಮಣ್ಯ ಭಟ್‌ರವರು ದೇವರ ಪ್ರಸಾದ ನೀಡಿ ಷಷ್ಠಿ ಮಹೋತ್ಸವಕ್ಕೂ ಎಲ್ಲರೂ ಬರುವಂತೆ ಆಹ್ವಾನಿಸಿ ಕೃತಜ್ಞತೆ ಸಲ್ಲಿಸಿದರು.

## ಕೆ. ಭಾಗ್ಯಚಂದ್ರ ಹಾಗೂ ಸಿ. ಸುಂದರ ರಾವ್ ಇವರಿಗೆ ಅಭಿನಂದನೆ



ವಿಶ್ವೇಶತೀರ್ಥ ವಿದ್ಯಾಲಯದ ನೂತನ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಶ್ರೀ ಪೇಜಾವರ ಮಠ ಉಡುಪಿ ಹಾಗೂ ಸಭಾಭವನದ ಉದ್ಘಾಟನೆ ಡಾ. ಜಿ. ಶಂಕರ್ ಉಡುಪಿ ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಶೋಭಾ ಕರಂದ್ಲಾಜೆ ಕೇಂದ್ರ ಸಚಿವರು, ಸುರೇಶ್‌ಶೆಟ್ಟಿ ಗುರ್ಮೆ, ಯಶ್‌ಪಾಲ್ ಸುವರ್ಣ, ವಿನಯ್‌ಕುಮಾರ್ ಸೊರಕೆ, ಪ್ರಮೋದ್‌ಮಧ್ವರಾಜ್, ಲಾಲಾಜಿ ಮೆಂಡನ್ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ನಮ್ಮ ಸಮಾಜದವರಾದ ನಿವೃತ್ತ ಮುಖ್ಯೋಪಾಧ್ಯಾಯರು ಕೆ. ಭಾಗ್ಯಚಂದ್ರ ಹಾಗೂ ಸುಂದರ ರಾವ್ ಮುಂತಾದವರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಶ್ರೀ ಶಾರದಾ ಮಂಟಪಕ್ಕೆ ದೇಣಿಗೆ



ಶ್ರೀ ಶಾರದಾ ಮಂಟಪದ ನವೀಕೃತ ಹವಾನಿಯಂತ್ರಿತ ಸಭಾಂಗಣಕ್ಕೆ ನಂದಳಿಕೆ ಶ್ರೀಕಾಂತ್ ರಾವ್ ಇವರು ಒಂದು ಲಕ್ಷ ರೂಪಾಯಿ ದೇಣಿಗೆಯನ್ನು ನೀಡಿರುತ್ತಾರೆ. ಇವರಿಗೆ ಸಂಘದ ಪರವಾಗಿ ಧನ್ಯವಾದಗಳು.

ಶ್ರೀ ಶಾರದಾ ಮಂಟಪದ ನವೀಕೃತ ಹವಾನಿಯಂತ್ರಿತ ಸಭಾಂಗಣಕ್ಕೆ ಸಂಘದ ಉಪಾಧ್ಯಕ್ಷರಾದ ಶ್ರೀ ಯು. ಅರವಿಂದ ಕುಮಾರ್ ಹಾಗೂ ಶ್ರೀಮತಿ ಆಶಾ ದಂಪತಿಗಳು ರೂ.25,000/– ದೇಣಿಗೆ ನೀಡಿ ಸಹಕರಿಸಿರುತ್ತಾರೆ. ಇವರಿಗೆ ಸಂಘದ ಪರವಾಗಿ ಧನ್ಯವಾದಗಳು.

# ಲಕ್ಷ ಕುಂಕುಮಾರ್ಚನೆ ಸಂಪನ್ನ





ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ ಇದರ ಆಶ್ರಯದಲ್ಲಿ ದಿನಾಂಕ 29.10.2023ರಂದು ಮುಂಡ್ಕೂರಿನ ಮುಲ್ಲಡ್ಕ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಸನ್ನಿಧಿಯಲ್ಲಿ ಲಕ್ಷ ಕುಂಕುಮಾರ್ಚನೆ ಸೇವೆಯು ಲೋಕ ಕಲ್ಯಾಣಕ್ಕಾಗಿ ಸಂಪನ್ನಗೊಂಡಿತು. ಸೇವೆಯಲ್ಲಿ ಪರಿಪಾಲನಾ ಸಭಾದ ಸದಸ್ಯರು ಹಾಗೂ ನಮ್ಮ ಸಮಾಜ ಬಾಂಧವರು, ಮಾತೆಯರು ಪಾಲ್ಗೊಂಡಿದ್ದರು. ಜಗದಾಭಿರಾಮರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡ ಸಭಾ ಕಾರ್ಯಕ್ರಮವನ್ನು ವಿಜಯ ಕುಮಾರ್ ಬೆಂಗಳೂರು ಇವರು ಉದ್ಘಾಟಿಸಿದರು. ವೇ.ಮೂ ಹೆಜಮಾಡಿ ಕೃಷ್ಣರಾಜ ಭಟ್ ಧಾರ್ಮಿಕ ಉಪನ್ಯಾಸಗೈದರು.



ನಮ್ಮ ಸಮಾಜದ ಹೆಮ್ಮೆಯ ಜ್ಯೋತಿಷ್ಯರಾದ ಕೆ.ವಿ.ರಾವ್ ಪಲಿಮಾರು ಇವರನ್ನು ಸನ್ಮಾನಿಸಲಾಯಿತು. ನಮ್ಮ ಸಮಾಜಕ್ಕೆ ಧಾರ್ಮಿಕವಾಗಿ ಮಾರ್ಗದರ್ಶನವನ್ನು ಕೇವಲ ವೃತ್ತಿಪರವಾಗಿ ನೀಡುವುದಲ್ಲದೆ ಇಂತಹ ಸಂಘಟನೆಯ ಮೂಲಕ ಕೂಡ ನೀಡುವುದು ಪ್ರತಿಯೊಬ್ಬ ವೈದಿಕರ ಕರ್ತವ್ಯ ಎಂದು ತಿಳಿದು ಸಂಘದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕರೆ ನೀಡಿದರು. ಕಾರ್ಯದರ್ಶಿ ಚಿದಾನಂದ ಶ್ಯಾನುಭೋಗ್ ವಂದಿಸಿದರು. ಕೋಶಾಧಿಕಾರಿ ಪ್ರತಾಪ್ ರಾವ್ ನಿರೂಪಿಸಿದರು.

# ಶಿವರಾವ್ ದಂಪತಿಗಳಿಗೆ ಸನ್ಮಾನ




ಅಜ್ಜಾವರ ಬಯಂಬು ಮನೆ ಶಿವರಾವ್ ದಂಪತಿಗಳನ್ನು, ಅವರ ಮನೆಯಲ್ಲಿ, ತ್ರಿಕಾಲ ಪೂಜಾ ನಂತರ, ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯ ಶಂಕರ ಬೊಳ್ಳಾವ ರವರು ವೈದಿಕ ರೀತಿಯಲ್ಲಿ ಸನ್ಮಾನಿಸಿ, ಸ್ಥಾನಿಕ ಸಮಾಜಕ್ಕೆ ಶಿವರಾಯರ ಕೊಡುಗೆಗಳನ್ನು ಸ್ಮರಿಸಿದರು. ಸುಳ್ಯ ಸ್ಥಾನಿಕ ಸಂಘದ ಸದಸ್ಯರು ಸಹಕರಿಸಿದರು.










SHREE SHARADA – Printed and Published by P. Prabhakara Bhandy on behalf of
Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar